# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026





ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038



ಸಂಪುಟ:02 • ಸಂಚಿಕೆ: 204 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 15.02.2025 • ಶನಿವಾರ • ಪುಟ:04 • ಬೆಲೆ:2

Volume:02 • Issue: 204 • PRGI No:KARKAN/2023/88055 • VIJAYANAGARA • 15.02.2025 • Saturday • Page:04 • Rs:2


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಕೆಲಸಕ್ಕೆ ಬೇಕಾಗಿದ್ದಾರೆ

ಮೆಡಿಕಲ್ ಶಾಪ್‌ನಲ್ಲಿ ಕೆಲಸ
ಕಂಪ್ಯೂಟರ್ ಆಪರೇಟರ್ – 1
ಬಾಯ್ – 2
ಸ್ಥಳ: ಹೊಸಪೇಟೆ
ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೊ: 9739303956


## ದಾಖಲೆಗಳು ಕಳೆದಿವೆ

ನೇತಾಜಿ ಗೌಡ.ಹೆಚ್ ತಂದೆ ಕೊಟ್ರಗೌಡ, ವಾಸ: ಬಾಚಿಗೊಂಡನಹಳ್ಳಿ-2, ಹಗರಿ ಬೊಮ್ಮನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ. ಆದ ನಾನು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ 15-01-2025ರಂದು ಹಗರಿಬೊಮ್ಮನಹಳ್ಳಿ ತಾಲೂಕು ಕಛೇರಿಗೆ ಹೋಗುವಾಗ ಬಸ್ ನಿಲ್ದಾಣದಲ್ಲಿ ಆಕಸ್ಮಿಕವಾಗಿ ನನ್ನ ಹೆಸರಿನಲ್ಲಿರುವ ಹೊಲದ ದಸ್ತಾವೇಜು ನಂ.353/99-2000 ಮೂಲ ಪತ್ರ ಕಳೆದುಕೊಂಡಿದ್ದು, ಯಾರಿಗಾದರೂ ದೊರೆತರೆ ಹ.ಬೊ.ಹಳ್ಳಿ ಪೊಲೀಸ್ ಠಾಣಾಧಿಕಾರಿಗಳಿಗೆ ತಲುಪಿಸಬೇಕೆಂದು ಈ ಮೂಲಕ ಕೋರಿದೆ.

# ಅನಧಿಕೃತ ಲೇಔಟ್ ನಿವೇಶನಗಳಿಗೆ ಬಿ ಖಾತೆ ನೀಡಲು ಸರ್ಕಾರ ಸಿದ್ಧ

## ಮಾರ್ಚ್ 30 ರೊಳಗೆ ಖಾತೆ ಹಂಚಿಕೆ | ಮಧ್ಯವರ್ತಿಗಳ ಮೊರೆ ಹೋಗಬೇಡಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ನಗರದಲ್ಲಿ 23 ಅನಧಿಕೃತ ಲೇಔಟ್

■ ಹಂಪಿ ಟೈಮ್ಸ್ ಹೊಸಪೇಟೆ



ಸರ್ಕಾರದ ಆದೇಶದಂತೆ 2024 ಸೆಪ್ಟೆಂಬರ್ ಮುಂಚಿನ ನಗರ ಪ್ರದೇಶದಲ್ಲಿನ ಅನಧಿಕೃತ ಲೇಔಟ್, ಕಂದಾಯ ಸ್ಥಳಗಳಲ್ಲಿರುವ ನಿವೇಶನ, ಕಟ್ಟಡಗಳಿಗೆ ಸರ್ಕಾರದಿಂದಲೇ ಬಿ ಖಾತೆ ಮಾಡಿಕೊಡಲಾಗುವುದು. ಬಿ ಖಾತಾ ಮಾಡಿಸಿಕೊಳ್ಳುವ ಸಲುವಾಗಿ ಸಾರ್ವಜನಿಕರು ಯಾವುದೇ ಮಧ್ಯವರ್ತಿಗಳ ಮೊರೆ ಹೋಗದಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಕೋರಿದ್ದಾರೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಹೊಸಪೇಟೆ ನಗರದ ವಿವಿಧ ಬಡಾವಣೆ, ಲೇ ಔಟ್‌ಗಳ ಬಿ ಖಾತೆ ಸಂಬಂಧಿಸಿದಂತೆ ಸಾರ್ವಜನಿಕರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ನಗರದಲ್ಲಿ 23 ಅನಧಿಕೃತ ಲೇ ಔಟ್‌ಗಳಲ್ಲಿ ಸುಮಾರು 1800 ಹೆಚ್ಚು ಜನರು ನಿವೇಶನ, ವಸತಿ ಸೇರಿದಂತೆ ವಾಣಿಜ್ಯ ಕಟ್ಟಡಗಳನ್ನು ಹೊಂದಿದ್ದಾರೆ. ಲೇ ಔಟ್ ಮಾಲೀಕರು ಪೂರ್ಣ ಪ್ರಮಾಣ ಅನುಮೋದನೆಯನ್ನು ಪಡೆಯದೇ ಸಾರ್ವಜನಿಕರಿಗೆ ನಿವೇಶನಗಳನ್ನು ಮಾರಿದ್ದಾರೆ. ಇದರಿಂದಾಗಿ ನಗರಸಭೆಯಲ್ಲಿ ಈ ನಿವೇಶನಗಳಿಗೆ ಖಾತೆ ಸಂಖ್ಯೆ ಸಿಗದೆ, ಮಾಲಿಕರಿಗೆ ತೊಂದರೆ ಉಂಟಾಗಿತ್ತು. ಹಕ್ಕು ಪತ್ರ ದೊರೆಯದ ಕಾರಣ, ಈ ಸ್ವತ್ತುಗಳ ಪರಭಾರೆ ಮಾಡುವುದು, ಕಷ್ಟ ಸಮಯದಲ್ಲಿ ಬ್ಯಾಂಕುಗಳಿಗೆ ಅಡಮಾನ ಹಾಕಲು ಸಾಧ್ಯವಾಗುತ್ತಿರಲಿಲ್ಲ. ಇಂತಹದು ಸಮಸ್ಯೆಗಳು ರಾಜ್ಯದ ಇತರೆ ಮಹಾನಗರ



ಹಾಗೂ ನಗರ ಪ್ರದೇಶಗಳಲ್ಲಿ ತಲೆದೊರಿದ್ದವು. ಇದರ ನಿವಾರಣೆಗಾಗಿ ರಾಜ್ಯ ಸರ್ಕಾರ 1964 ಕರ್ನಾಟಕ ಭೂ ಕಂದಾಯಗಳ ಅಧಿನಿಯಮ 106 ವಿಧಿಗೆ ತಿದ್ದುಪಡಿ ತಂದಿದೆ. ಇದರ ಅನ್ವಯ 2024 ಸೆಪ್ಟೆಂಬರ್ ಮುಂಚಿನ ನಗರ ಪ್ರದೇಶದಲ್ಲಿನ ಅನಧಿಕೃತ ಲೇಔಟ್, ಕಂದಾಯ ಸ್ಥಳಗಳಲ್ಲಿರುವ ನಿವೇಶನ, ಕಟ್ಟಡಗಳಿಗೆ ಒಮ್ಮೆಗೆ ದುಪ್ಪಟ್ಟು ಕಂದಾಯ ಕಟ್ಟಿಸಿಕೊಂಡು ಬಿ ಖಾತೆ ಮಾಡಿಕೊಡಲಾಗುವುದು. ಇದರಿಂದ ಸ್ವತ್ತಿನ ಮಾಲೀಕರಿಗೆ ಪರಭಾರೆ ಹಾಗೂ ಅಡ ಮಾನ ಮಾಡಲು ಅಧಿಕಾರ ದೊರಕಲಿದೆ. ಸರ್ಕಾರದಿಂದಲೇ ಈ ಬಡಾವಣೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುವುದು ಎಂದರು.

**ಬಿ ಖಾತೆ ನೀಡಲು ಶಿಬಿರಗಳ ಆಯೋಜನೆ:**

ಹಂಪಿ ಉತ್ಸವದ ಬಳಿಕ ನಗರದಲ್ಲಿ ಗುರುತಿಸಲಾಗಿರುವ ಅನಧಿಕೃತ ಲೆ ಔಟ್‌ಗಳಲ್ಲಿ ಶಿಬಿರಗಳನ್ನು ಆಯೋಜಿಸಲಾಗುವುದು. ಸ್ಥಳದಲ್ಲಿಯೇ ಅಗತ್ಯ ದಾಖಲೆಗಳನ್ನ ಪಡೆದು, ದಾಖಲೆಗಳು ಸರಿಯಿದ್ದರೆ, ತಕ್ಷಣವೇ ಮಾಲೀಕರಿಗೆ ಬಿ ಖಾತೆ ಹಕ್ಕು ಪತ್ರವನ್ನು ನೀಡಲಾಗುವುದು. ಈ ವೇಳೆ ಸಾರ್ವಜನಿಕರು ಹೆಸರು, ಅಳತೆ, ಚಕ್ಕಬಂದಿ ಸೇರಿದಂತೆ ಹಲವಾರು ತಿದ್ದುಪಡಿಗೆ ಅರ್ಜಿ ಸಲ್ಲಿಸಬಹುದು. ಇದಕ್ಕೆ ಅನುಕೂಲವಾಗುವಂತೆ ನಗರಸಭೆಯಲ್ಲಿ ಸಿ ಫಾರಂಗಳನ್ನು ನೀಡಲಾಗುವುದು. ಬರುವ ಮಾರ್ಚ್ 30 ರ ಒಳಗೆ ಬಿ ಖಾತೆಗಳನ್ನು ಹಂಚಿಕೆ ಮಾಡುವುದಾಗಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದರು.

ಈಗ ನೀಡುವ ಬಿ ಖಾತೆಗಳನ್ನು ಮುಂದಿನ 3 ವರ್ಷಗಳ ನಂತರ ಎ ಖಾತೆಗಳನ್ನಾಗಿ ಪರಿವರ್ತಿಸಲಾಗುವುದು. ಬಿ ಖಾತೆ ಪಡೆದವರು ತಮ್ಮ ಆಸ್ತಿಗಳನ್ನು ಪರಬಾರೆ ಮಾಡಬಹುದು. ಆದರೆ ಹೊಸದಾಗಿ ಕಟ್ಟಡ ನಿರ್ಮಾಣಕ್ಕೆ ನಗರ ಸಭೆಯಿಂದ ಅನುಮತಿ ನೀಡುವುದಿಲ್ಲ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್ ತಿಳಿಸಿದರು. ಸಾರ್ವಜನಿಕರು ಉಪಸ್ಥಿರಿದ್ದರು.

### ಸುಕ್ಷೇತ್ರ ಮೈಲಾರ ಕಾರ್ಣೀಕೋತ್ಸವ

# ತುಂಬಿದ ಕೊಡ ತುಳುಕಿತಲೇ ಪರಾಕ್



■ ಹಂಪಿ ಟೈಮ್ಸ್ ಹೊಸಪೇಟೆ

'ತುಂಬಿದ ಕೊಡ ತುಳುಕಿತಲೇ ಪರಾಕ್' ಈ ಬಾರಿಯ ಪ್ರಸಿದ್ಧ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ಕಾರ್ಣಿಕೋತ್ಸವದಲ್ಲಿ ಗೊರವಯ್ಯ ರಾಮಪ್ಪ ನುಡಿದ ದೈವವಾಣಿ.

> **ಪ್ರಸಕ್ತ ವರ್ಷದಲ್ಲಿ ತುಂಬಿದ ಕೊಡವೆಂದರೆ ಶ್ರೇಷ್ಠ, ವಿಪರೀತ ಮಳೆಯಿಂದಾಗಿ ಸಮೃದ್ಧಿ ಬೆಳೆ ಬೆಳೆದು ರೈತಾಪಿ ವರ್ಗಕ್ಕೆ ಹರ್ಷ ತರಲಿದೆ. ರಾಜ್ಯ ಮತ್ತು ರಾಷ್ಟ್ರ ಸುಭಿಕ್ಷೆಯಿಂದರಲಿದೆ ಎಂದು ಮೈಲಾರಲಿಂಗೇಶ್ವರ ದೇಗುಲದ ಧರ್ಮದರ್ಶಿ ವೆಂಕಪ್ಪಯ್ಯ ಒಡೆಯರ್ ಅವರು ವಿಶ್ಲೇಷಿಸಿದರು**

ಮೈಲಾರ ಲಿಂಗೇಶ್ವರ ಜಾತ್ರೋತ್ಸವದ ನಿಮಿತ್ತ ಡೆಂಕನಮರಡಿಯಲ್ಲಿ ಢಮರುಗದ ನಿನಾದ, ಚಾಟಿ ಬೀಸಿ ಚಟ್ ಚಟ್ ಸದ್ದು, ಪ್ರಜ್ವಲಿಸುತ್ತಿದ್ದ ದೀವಟಿಗೆ, ಬೆತ್ತ, ಸರಪಳಿಯ ನೂರಾರು ಗೊರವಪ್ಪರು, ನೆರೆದಿದ್ದ ಲಕ್ಷಾಂತರ ಭಕ್ತರು ಏಳು ಕೋಟಿ, ಏಳು ಕೋಟಿ ಚಾಂಗ್ ಬಲೋ ಭಕ್ತಿಯ ಪರಾಕಾಷ್ಠೆ ಮೈಲಾರ ಲಿಂಗೇಶ್ವರ ಜಾತ್ರೆಗೆ ಮೆರುಗು ನೀಡಿತ್ತು.

ಮೈಲಾರದಲ್ಲಿ ವಿರಾಜ ಮಾನರಾಗಿದ್ದ ನೂರಾರು ಗೊರವಪ್ಪ ಮತ್ತು ಮೈಲಾರ ಲಿಂಗೇಶ್ವರ ಸ್ವಾಮಿ ದರ್ಶನ ಪಡೆದರು.

ಧರ್ಮಕರ್ತ ವೆಂಕಪ್ಪಯ್ಯ ಒಡೆಯರ್ ಅವರನ್ನು ಅಶ್ವರೂಢರಾಗಿ ಡೆಂಕನಮರಡಿಗೆ ಆಗಮಿಸಿದರು. 11 ದಿನ ಉಪವಾಸ ವ್ರತ ಆಚರಿಸಿದ್ದ ಗೊರವಯ್ಯ ರಾಮಪ್ಪ ಅವರನ್ನು ಪಾದಗಟ್ಟೆಯ ಮರಡಿಯಿಂದ ಮೆರವಣಿಗೆ ಮೂಲಕ ಕರೆತರಲಾಯಿತು. >>4






## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 34 ದಿನ

https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೆ ಶಿಲ್ಪಿ | ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಹಿಂದಿ

### 10 ನೇ ತರಗತಿ ಮಾದರಿ ಉತ್ತರ - ಪತ್ರಿಕೆ ಹಿಂದಿ

**V. निम्नलिखित प्रश्नों के उत्तर तीन-चार वाक्यों में लिखिए : 9 x 3 =27**

**01) भारत माँ के प्रकृति- सौंदर्य का वर्णन कीजिए ।**

**उत्तर :** * भारत माँ के खेत हरे - भरे और सुहाने हैं ।
*भारत के अनेक वन उपवन फल-फूलों से लदे हुए हैं ।
* भारत की धरती के अंदर अपार खनिज संपदा भरा हुआ है ।
* भारत माता सुख- संपत्ति धन- धाम को मुक्त हस्थ से सभी भारतीयो को बाँट रही है ।

**02) गिल्लू के कार्य-कलाप के बारे में लिखिए ।**

**उत्तर : गिल्लू के कार्य - कलाप :**
* महादेवी वर्मा जी का ध्यान आकर्षित करने के लिए उनके पैर तक आकर सर्र से परदे पर चढता और उतरता था ।
* वर्मा जी को चौंकाने के लिए कभी फूलदान के फूलों में, कभी परदे की चुन्नट में, और सोनजुही की पत्तियों में छिप जाता था ।
* खाते समय थाली में से एक-एक चावल उठाकर बडी सफाई से खाता रहता ।
* लेखिका के सिरहाने बैठकर अपने नन्हे पंजों से सिर और बालों को हौले से सहलाता था ।
* खिडकी के रास्ते से बाहर जाकर दिन भर गिलहरियों के झुंड का नेता बनकर हर डाल पर उछलता-कूदता रहता था ।

**03) ' सोशल नेटवर्किंग ' एक क्रांतिकारी खोज है । कैसे ?**

**उत्तर :***" सोशल नेटवर्किंग " एक क्रांतिकारी खोज है ,
* जिसने दुनिया भर के लोगों को एक जगह पर ला खडा कर दिया है ।
* सोशल नेटवर्किंग के कई साइट्स है, जैसे फेसबुक, आरकुट ट्विट्टर, लिंकडाईन आदि ।
* इन साइट्सों के कारण देश -विदेश के लोगों की रहन - सहन , वेश -भूषा, खान - पान के अलाव संस्कृति, कला आदि का प्रभाव शीघ्रातिशिघ्र हमारे समाज पर पडा है ।

**04) समय की पहचान कविता के अंतिम चार पंक्तियो में कवि क्या कहना चाहता है ?**

**उत्तर :** *आधुनिक मनुष्य ने प्रकृति के हर तत्व पर विजय पाई है ।
* वारि, विद्युत, भाप इनका नियंत्रण में है ।
* इनका हुक्म पर पवन का ताप चढता और उतरता है ।
* आधुनिक मनुष्य ने नदी, सागर, पर्वत आदि को एक समान लाँघ सकता है ।
* आधुनिक मनुष्य का यान गगन में जा रहा है ।
* यह आधुनिक मनुष्य की भौतिक साधना है ।

**05) एवरेस्ट की चोटी पर पहुँचकर बचेन्द्री ने क्या किया ?**

**उत्तर :** एवरेस्ट की चोटी पर पहुँचकर बचेन्द्री ने फावडे से पहले बर्फ की खुदाई करके अपने आप को सुरक्षित रूप से स्थिर किया | इसके बाद मैं अपने घुटनो के बल बैठी | बर्फ पर अपने माथे को लगाकर मैंने सागरमाथे के ताजा का चुंबन किया | बिना उठे ही मैंने अपने थैले से हनुमान चालीसा और दुर्गा माँ का चित्र निकाला | मैंने इन्हे अपने साथ लाए लाल कपडे में लपेटा और छोटी- सी पूजा करके इनको बर्फ में दबा दिया |

**06) धीरज सक्सेना ने रोबोट रखने क निर्णय क्यों लिया ?**

**उत्तर :**वर्षों से सक्सेना परिवार मे साधोराम नामक एक नौकर काम कर रहता था। अचानक एक दिन चलती बस से गिरकर उसे खतरनाक चोट आ गई । उसे अस्पताल में भर्ती करना पडा । सक्सेना परिवार बडा था । बेटे-बेटियो, नाती-पोतोम से घर में हमेशा रौनक और चहल-पहल बनी रहती । साधोराम के अस्पताल पहुँच जाने से सभी की तकलीफें बढ गई | धीरज सक्सेना से परिवारवालो का यह दु:ख नही देखा गया | तभी परिवार के मुखिया के नाते उन्होने कोई फैसला करना किया |इसलिए धीरज सक्सेना ने घरेलू कामकाज के लिए रोबोट रखने का निर्णय लिया।

**07) बसंत ईमानदार लडका है । कैसे ?**

**उत्तर:**वह गरीब होने पर भी भीख लेना नही चाहते थे। वह परिश्रम से पैसे कमाना चाहता था। पं राजकिशोर का चिल्लर पैसे लौटाने अपने भाई प्रताप को भेजता है।

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

**Classified Advertisements**
Examples: Job postings, Real estate listings, Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances. Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com

# ಚಂದ್ರನಲ್ಲಿ ವಾಸ ಹೇಗಿರುತ್ತೆ?




ಭೂಮಿಯ ಸ್ವಾಭಾವಿಕ ಉಪಗ್ರಹವಾದ ಚಂದ್ರನ ಕುರಿತು ನಮಗೆಲ್ಲ ಮೋಹ. ಚಂದ್ರನ ಬಗ್ಗೆ ಬರೆಯದ ಕವಿಗಳೇ ಇಲ್ಲ ಎನ್ನಬಹುದು. ಚಂದ್ರನ ಕುರಿತ ಕಥೆ ಕವನಗಳಿಗೆ ಕೊನೆಯೇ ಇಲ್ಲ. ಚಂದ್ರನ ಬಗ್ಗೆ ನಮಗೆಲ್ಲಾ ಅಷ್ಟೊಂದು ಅಕ್ಕರೆ, ಪ್ರೀತಿ. ರಾತ್ರಿ ಮಕ್ಕಳು ಊಟ ಮಾಡಿ ಮಲಗಲು ಕಿರಿಕಿರಿ ಮಾಡುವಾಗ ತಾಯಿ ಚಂದ್ರನನ್ನು ತೋರಿಸುತ್ತಾ 'ಚಂದಮಾಮ' ಎಂದು ಹೆಸರಿಸುತ್ತಾ ಊಟ ಮಾಡಿಸಿ ಸದ್ದಿಲ್ಲದೇ ಮಲಗಿಸಿದ ಕ್ಷಣಗಳು ಇನ್ನೂ ನೆನಪಿನಿಂದ ಮಾಸಿಲ್ಲ. ಪ್ರೇಮಿಗಳಿಗಂತೂ ಚಂದ್ರ ಚಿನ್ನ, ರನ್ನ ಇದ್ದಂತೆ. ದೂರದಲ್ಲಿರುವ ಆ ಚಂದ್ರನ ಬಗ್ಗೆ ಇಷ್ಟೊಂದು ಮೋಹ ಇರುವಾಗ ಒಮ್ಮೆ ಯಾಕೆ ನಾವು ಚಂದ್ರನ ಬಳಿ ಹೋಗಬಾರದು? ಅವನಲ್ಲಿ ಒಂದಿಷ್ಟು ದಿನ ಕಾಲ ಕಳೆದರೆ ಏನಾಗುತ್ತೆ? ಎಂಬ ಪ್ರಶ್ನೆ ಮೂಡದಿರದು.

ಮೊದಲನೆ ಪ್ರಶ್ನೆಗೆ ಈಗಾಗಲೇ ನಮಗೆ ಉತ್ತರ ದೊರಕಿದೆ. ಚಂದ್ರನಲ್ಲಿಗೆ ಮಾನವರೂ ಸಹ ಹೋಗಬಹುದು ಎಂಬುದಕ್ಕೆ ಮಾರ್ಗ ದೊರಕಿದೆ. ಭೂಮಿಯನ್ನು ಬಿಟ್ಟು ಮಾನವ ನಡೆದಾಡಿದ ಏಕೈಕ ಆಕಾಶಕಾಯವೆಂದರೆ ಚಂದ್ರ. ಇದಕ್ಕೆ ಸಾಕ್ಷಿಯಾಗಿ ಜುಲೈ 1969ರಲ್ಲಿ ಮಾನವ ಸಹಿತ 'ಅಪೋಲೋ–11' ರ ನೌಕೆ ಚಂದ್ರ ಮೇಲೆ ಇಳಿಯಿತು. ನೌಕೆಯಲ್ಲಿದ್ದ 'ನೀಲ್ ಆರ್ಮ್ ಸ್ಟ್ರಾಂಗ್' ಚಂದ್ರನ ಮೇಲೆ ಕಾಲಿಡುತ್ತಲೇ "ಮಾನವನ ಈ ಸಣ್ಣ ಹೆಜ್ಜೆ, ಮನುಕುಲದ ದೊಡ್ಡ ನೆಗೆತ" ಎಂದು ಹೇಳಿದ್ದ. ಅಂದಿನಿಂದ ಚಂದ್ರ ಕುರಿತು ಅನೇಕ ಅನ್ವೇಷಣೆಗಳು ನಡೆಯತೊಡಗಿದವು. ಜಗತ್ತಿನ ಕೆಲ ರಾಷ್ಟ್ರಗಳು ಚಂದ್ರನಲ್ಲಿ ನೆಲೆಯೂರಲು ಅಗತ್ಯ ಸಿದ್ದತೆಗಳನ್ನು ಸಹ ಮಾಡಿಕೊಂಡವು. ಅದರಲ್ಲಿ ನಮ್ಮ ಭಾರತವೂ ಹಿಂದೆ ಬಿದ್ದಿಲ್ಲ. ಅದಕ್ಕಾಗಿ ಮಹತ್ವದ ಎರಡು ಚಂದ್ರಯಾನ ಯೋಜನೆಗಳನ್ನು ರೂಪಿಸಿದೆ. ಇತ್ತೀಚಿಗೆ ಚಂದ್ರಯಾನ–2 ಯೋಜನೆಯು ಭಾಗಶಃ ಫಲಪ್ರದವಾಗಿದೆ. ಇಷ್ಟೊಂದು ಮಹತ್ವವುಳ್ಳ ಚಂದ್ರನಲ್ಲಿ ವಾಸ ಮಾಡುವಾಸೆ ಎಲ್ಲರಲ್ಲೂ ಸಹಜ. ಬನ್ನಿ ನಾವೂ ಸಹ ಅಲ್ಲಿಗೆ ತೆರಳಿ, ಅಲ್ಲಿನ ಜೀವನ ಹೇಗಿರುತ್ತೆ ಅಂತ ತಿಳಿಯುವ ಪ್ರಯತ್ನ ಮಾಡೋಣ.

### ಹಾರುತ ದೂರ ದೂರ...

ಚಂದ್ರ 3474 ಕಿ.ಮೀ ವ್ಯಾಸ ಹೊಂದಿದ್ದು, ಸೌರವ್ಯೂಹದ 5ನೇ ದೊಡ್ಡ ಹಾಗೂ 5ನೇ ಭಾರವಾದ ಉಪಗ್ರಹವಾಗಿದೆ. ಚಂದ್ರ ಭೂಮಿಯ ನೈಸರ್ಗಿಕ ಉಪಗ್ರಹವಾಗಿದ್ದು, ಭೂಮಿಯನ್ನು ಒಂದು ಸುತ್ತು ಸುತ್ತಲು 27.3 ದಿನಗಳು ಬೇಕಾಗುತ್ತವೆ. ಭೂಮಿ ಮತ್ತು ಚಂದ್ರನ ನಡುವಿನ ದೂರ 3,84,399 ಕಿ.ಮೀ. ಅಂತರಿಕ್ಷ ನೌಕೆಯಲ್ಲಿಯೇ ಚಂದ್ರನಲ್ಲಿಗೆ ಹೋಗಬೇಕು. ಅಂತರಿಕ್ಷ ನೌಕೆಯಲ್ಲಿ ಸತತವಾಗಿ 3 ದಿನಗಳು ಪ್ರಯಾಣಿಸಿದರೆ ಚಂದ್ರನನ್ನು ತಲುಪಲು ಸಾಧ್ಯವಾಗುತ್ತದೆ.

### ಚಂದ್ರನಲ್ಲಿ ವಾಸ...

ಚಂದ್ರನಲ್ಲಿ ವಾಸಿಸಲು ಒಂದಿಷ್ಟು ಮೂಲಭೂತ ಅವಶ್ಯಕತೆಗಳು ಬೇಕಾಗುತ್ತವೆ. ಅವುಗಳೆಂದರೆ ಗಾಳಿ, ನೀರು ಮತ್ತು ಆಹಾರ. ಚಂದ್ರನಲ್ಲಿ ಮಾನವರು ಉಸಿರಾಡಲು ಬೇಕಾದ ಆಮ್ಲಜನಕವನ್ನು ಪಡೆಯಬಹುದು. ಚಂದ್ರನ ಮಣ್ಣಿನಲ್ಲಿ 42% ಆಮ್ಲಜನಕವಿದೆ. ಶಾಖ ಮತ್ತು ವಿದ್ಯುತ್ ಬಳಸಿ, ಚಂದ್ರನ ಮಣ್ಣಿನಲ್ಲಿ ಆಮ್ಲಜನಕವನ್ನು ಉಸಿರಾಟಕ್ಕಾಗಿ ಬಳಸಿಕೊಳ್ಳಬಹುದು. ಈಗಾಗಲೇ ನಾಸಾ ಈ ಪ್ರಯತ್ನದಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಚಂದ್ರನ ಮಣ್ಣಿನಲ್ಲಿರುವ ಆಮ್ಲಜನಕವನ್ನು ಮಾನವರ ಉಸಿರಾಟಕ್ಕೆ ಉಪಯುಕ್ತವಾಗುವಂತೆ ಮಾಡಲು ರೋಬಾಟ್‌ಗಳನ್ನು ನಿರ್ಮಿಸಿದೆ.

ಮಾನವರು ಬದುಕಲು ನೀರು ಬೇಕೇ ಬೇಕು. ಆದರೆ ಚಂದ್ರನ ಮೇಲೆ ಸದ್ಯಕ್ಕೆ ನೀರು ಇಲ್ಲ. ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು ಇತ್ತು ಎಂಬುದಕ್ಕೆ ಒಂದಿಷ್ಟು ಪುರಾವೆಗಳು ದೊರೆತಿವೆ. ಅಲ್ಲಿನ ಮಂಜುಗಡ್ಡೆ ಸಮಾಧಿಗಳಿಂದ ಗಣಿಗಾರಿಕೆ ಮೂಲಕ ನೀರನ್ನು ತೆಗೆಯಲು ಸಾಧ್ಯವಿದೆ. ಆದರೆ ಇದು ವೆಚ್ಚದಾಯಕ. ಸದ್ಯಕ್ಕಿರುವ ಒಂದು ಮಾರ್ಗವೇನೆಂದರೆ ಭೂಮಿಯಿಂದ ದ್ರವರೂಪದ ಹೈಡ್ರೋಜನ್‌ನ್ನು ಆಮದು ಮಾಡಿಕೊಳ್ಳುವುದು. ಚಂದ್ರನ ಮಣ್ಣಿನಿಂದ ಆಮ್ಲಜನಕ ದೊಂದಿಗೆ ಪ್ರತಿಕ್ರಿಯಿಸಿ ನೀರನ್ನು ಸೃಷ್ಟಿಸುವುದು.

ಒಬ್ಬ ವ್ಯಕ್ತಿ ವರ್ಷಕ್ಕೆ ಅಂದಾಜು 450 ಪೌಂಡ್ ದ್ರವರೂಪದ ಆಹಾರವನ್ನು ಸೇವಿಸುತ್ತಾನೆ. ಚಂದ್ರನಲ್ಲಿ ವಾಸಿಸಲು ಆಹಾರದ ಸಮಸ್ಯೆ ತಲೆದೋರುತ್ತದೆ. ಸದ್ಯಕ್ಕೆ ಚಂದ್ರನಲ್ಲಿ ಆಹಾರದ ಬೆಳೆಗಳನ್ನು ಬೆಳೆಯಲು ಅವಕಾಶವಿಲ್ಲ. ಏಕೆಂದರೆ ಬೆಳೆಗಳು ಬೆಳೆಯಲು ಅಗತ್ಯವಾದ ಸಾರಜನಕ ಅಲ್ಲಿ ಲಭ್ಯವಿಲ್ಲ. ಜೊತೆಗೆ ಅಲ್ಲಿನ ಮಣ್ಣಿನಲ್ಲಿ ಧೂಳಿನ ಅಂಶಗಳೇ ಹೆಚ್ಚಾಗಿರುವುದರಿಂದ ಸಸ್ಯದ ಬೇರುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಸಾಮರ್ಥ್ಯ ಮಣ್ಣಿನಲ್ಲಿ ಇಲ್ಲ. ಆದರೆ ಇದಕ್ಕೂ ಒಂದಿಷ್ಟು ಮಾರ್ಗವಿದೆ. ಅದೇನೆಂದರೆ ತತ್‌ಕ್ಷಣಕ್ಕೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಭೂಮಿಯಿಂದ ರವಾನಿಸಿ ಕೊಂಡು ತಿನ್ನುವುದು. ವ್ಯಕ್ತಿ ತಿಂದ ಆಹಾರವು ಘನತ್ಯಾಜ್ಯ ಮತ್ತು ದ್ರವತ್ಯಾಜ್ಯದ ರೂಪದಲ್ಲಿಹೊರಹಾಕುತ್ತಾನೆ. ಈ ತ್ಯಾಜ್ಯ ಉತ್ಪನ್ನಗಳು ಪೋಷಕಾಂಶಗಳನ್ನಾಗಿಸಲು ಭೂಮಿಯಿಂದ ಎರೆಹುಳು ತಂದು ಸಾಕಬೇಕು. ಅವುಗಳು ಸಸ್ಯಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಉತ್ಪತ್ತಿ ಮಾಡುತ್ತವೆ. ಆಗ ಭೂಮಿಯಿಂದ ತಂದ ಬೀಜಗಳಿಂದ ಬೆಳೆಗಳನ್ನು ಬೆಳೆದು ಆಹಾರ ಸೇವಿಸಬಹುದು. ಆದರೆ ಈ ಪ್ರಕ್ರಿಯೆ ನಡೆಯಲು ಚಂದ್ರನಲ್ಲಿ ಟನ್‌ಗಟ್ಟಲೆ ಆಹಾರದ ತ್ಯಾಜ್ಯಗಳು ಬೇಕಾಗುತ್ತವೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಮೂರು ಮೂಲಭೂತ ಅವಶ್ಯಕತೆಗಳ ಜೊತೆಗೆ ವಸತಿಯ ಬಗ್ಗೆಯೂ ಒಂದಿಷ್ಟು ಆಲೋಚಿಸಬೇಕಾಗುತ್ತದೆ. ಮನೆ ನಿರ್ಮಿಸಲು ಅಗತ್ಯವಾದ ಕಲ್ಲು/ಇಟ್ಟಿಗೆ, ಸಿಮೆಂಟ್, ಮರಳು ಅಲ್ಲಿಲ್ಲ. ಮಣ್ಣಿನ ಮನೆಗಳನ್ನು ನಿರ್ಮಿಸಿಕೊಳ್ಳಬಹುದು. ಆದರೆ ನಿರ್ಮಾಣಕ್ಕೆ ಬೇಕಾದ ನೀರು ಸದ್ಯಕ್ಕೆ ಇಲ್ಲ. ಸದ್ಯಕ್ಕೆ ಭೂಮಿಯಿಂದ ಒಯ್ದ ಟೆಂಟ್ ಮನೆಗಳನ್ನು ಮಾತ್ರ ನಿರ್ಮಿಸಿಕೊಳ್ಳಬಹುದು. ಇದು ಒಂದಿಷ್ಟು ಅಪಾಯಕಾರಿಯಾಗಿದೆ. ಏಕೆಂದರೆ ಬಾಹ್ಯಾಕಾಶ ವಿಕಿರಣದಿಂದ ಪ್ಲಾಸ್ಟಿಕ್ ಟೆಂಟ್‌ಗಳು ಅಪಾಯ ತಂದೊಡ್ಡುತ್ತವೆ. ಅಲ್ಲದೇ ಚಂದ್ರನ ಮೇಲ್ಮೈ ಮೇಲೆ ನಿರಂತರವಾಗಿ ಉಲ್ಕೆಗಳ ಬಾಂಬ್ ಸ್ಫೋಟವೂ ಸಹ ನಡೆಯುತ್ತಲೇ ಇರುತ್ತದೆ. ಇದಕ್ಕಾಗಿ ವಿಜ್ಞಾನಿಗಳು ಚಂದ್ರನ ಮಣ್ಣಿನಿಂದ ಇಟ್ಟಿಗೆ ನಿರ್ಮಿಸಿ, ಇಗ್ಲೂ ರೀತಿಯ ಮನೆಗಳನ್ನು ನಿರ್ಮಿಸಿಕೊಂಡು ಜೀವಿಸಬಹುದೆಂದು ಹೇಳಿದ್ದಾರೆ. ಭವಿಷ್ಯದಲ್ಲಿ ಸೆರಾಮಿಕ್ ಅಥವಾ ಲೋಹದ ಮನೆಗಳನ್ನು ನಿರ್ಮಿಸುವ ಸಾಧ್ಯತೆಯ ಬಗ್ಗೆ ಆವಿಷ್ಕಾರಗಳು ನಡೆಯುತ್ತಿವೆ.

ರಾತ್ರಿ ಅಥವಾ ಸೂರ್ಯನ ಬೆಳಕು ಬೀಳದಿದ್ದಾಗ ಕತ್ತಲೆ ಓಡಿಸಲು ಬೆಳಕಿನ ಅವಶ್ಯಕತೆ ಇದೆ. ಸೌರಕೋಶಗಳಿಂದ ವಿದ್ಯುತ್ ತಯಾರಿಸಲು ಅವಕಾಶಗಳಿವೆ. ಮೊದಲೇ ಚರ್ಚಿಸಿದಂತೆ ಹೈಡ್ರೋಜನ್ ಮತ್ತು ಆಮ್ಲಜನಕಗಳನ್ನು ಇಂಧನ ಕೋಶಗಳಲ್ಲಿ ಪ್ರತಿಕ್ರಿಯಿಸಿ ವಿದ್ಯುತ್ ರಚಿಸಬಹುದು. ಅಲ್ಲದೇ ಚಂದ್ರನ ಮೇಲೆ ಯುರೇನಿಯಂ ಸಾಕಷ್ಟು ಪ್ರಮಾಣದಲ್ಲಿದೆ. ಯುರೇನಿಯಂನ್ನು ಬಳಸಿ ವಿದ್ಯುತ್ ತಯಾರಿಸಿ ಬಳಸಬಹುದು.

ಚಂದ್ರನ ಸಾಂದ್ರತೆ ಭೂಮಿಯ ಸಾಂದ್ರತೆಗಿಂತ ಸ್ವಲ್ಪ ಭಿನ್ನವಾಗಿದೆ. ಚಂದ್ರನ ಮೇಲ್ಮೈ ಗುರುತ್ವವು ಭೂಮಿಯ ಆರನೇ ಒಂದು ಭಾಗ ಮಾತ್ರ ಇದೆ. ಈ ಗುರುತ್ವದಲ್ಲಿ ನಮ್ಮ ಚಲನವಲನಗಳನ್ನು ಹೇಗೆ ನಿಯಂತ್ರಿಸಿಕೊಳ್ಳಬೇಕೆಂಬ ಬಗ್ಗೆ ತರಬೇತಿ ಅಗತ್ಯ. ಇನ್ನು ಭೂ ತಾಪಮಾನಕ್ಕೂ ಚಂದ್ರ ತಾಪಮಾನಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಸೂರ್ಯನ ಬೆಳಕು ಚಂದ್ರನ ಮೇಲ್ಮೈಗೆ ಬಿಡಿದಾಗ ತಾಪಮಾನವು 1270 ಸೆಲ್ಸಿಯಸ್ ತಲುಪುತ್ತದೆ. ಅಂತೆಯೇ ಸೂರ್ಯ ಮುಳುಗಿದಾಗ ಚಂದ್ರನ ತಾಪಮಾನವು –1730 ಸೆಲ್ಸಿಯಸ್‌ಗೆ ಇಳಿಯುತ್ತದೆ. ಇಂತಹ ವೈರುಧ್ಯ ತಾಪಮಾನದಲ್ಲಿ ಮಾನವನ ಬದುಕು ಅಸಹನೀಯ ವಾಗಿರುತ್ತದೆ.

ಚಂದ್ರನ ಸಹವಾಸದಲ್ಲಿ ನಾವು ಮೂರು ರೀತಿಯ ಅಪಾಯಕಾರಿ ವಿಕಿರಣಗಳಿಗೆ ಒಡ್ಡಿಕೊಳ್ಳಬೇಕಾಗುತ್ತದೆ. ಅವುಗಳೆಂದರೆ ಸೌರ ಮಾರುತಗಳು, ಸೌರ ಜ್ವಾಲೆಗಳು ಮತ್ತು ಕಾಸ್ಮಿಕ್ ಕಿರಣಗಳು. ಸೌರಮಾರುತಗಳು ಅಸಮಾನವಾಗಿ ಹಂಚಲ್ಪಟ್ಟಿವೆ. ಅವುಗಳಲ್ಲಿನ ತಟಸ್ಥ ಪ್ಲಾಸ್ಮಾ ಸೆಕೆಂಡಿಗೆ 400 ಕಿ.ಮೀ ವೇಗದಲ್ಲಿ ಚಲಿಸುತ್ತವೆ. ಇದು ಪ್ರತಿ ಘನ ಸೆಂಟಿ ಮೀಟರ್‌ಗೆ ಸರಾಸರಿ 10 ಕಣಗಳ ಸಾಂದ್ರತೆಯನ್ನು ಹೊಂದಿರುತ್ತದೆ. ಸೌರಜ್ವಾಲೆಯ ನಿಖರವಾದ ಮಾಹಿತಿಯನ್ನು ಊಹಿಸುವುದು ಕಷ್ಟ. ಆದರೆ ಜ್ವಾಲೆಗಳ ಆವರ್ತನವು 11 ವರ್ಷಗಳ ಸೌರ ಚಕ್ರಕ್ಕೆ ಸಂಬಂಧಿಸಿದೆ. ಗ್ಯಾಲಾಕ್ಟಿಕ್ ಕಾಸ್ಮಿಕ್ ಕಿರಣಗಳು ಚಂದ್ರನಿಂದ ಆಚೆ ಉತ್ಪತ್ತಿಯಾಗುತ್ತವೆ. ಕಾಸ್ಮಿಕ್ ಕಿರಣಗಳು ಹೆಚ್ಚಿನ ಪ್ರೋಟಾನ್, ಎಲೆಕ್ಟ್ರಾನ್, ನ್ಯೂಟ್ರಾನ್, ಪಾಸಿಟ್ರಾನ್ ಮತ್ತು ಗಾಮಾ ಕಿರಣಗಳನ್ನು ಹೊಂದಿವೆ. ಈ ಕಿರಣಗಳ ತೀವ್ರತೆಯು ಮಾನವ ಜೀವನಕ್ಕೆ ಅಪಾಯ ತಂಡೊದ್ದುತ್ತವೆ.

ಚಂದ್ರನ ಮೇಲೆ ಮಾನವನ ಶಾಶ್ವತ ವಾಸವು ಅನೇಕ ಅಪಾಯಗಳನ್ನು ತಂದೊಡ್ಡುತ್ತದೆ. ಚಂದ್ರನ ವಾಸವು ನಮ್ಮ ಸುರಕ್ಷತೆ ಮತ್ತು ಆರೋಗ್ಯದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಚಂದ್ರನ ವಾತಾವರಣಕ್ಕೆ ಹೊಂದಿಕೊಳ್ಳುವ ಸೂಟ್ ಧರಿಸುವ ಪ್ರಯತ್ನದಲ್ಲಿ ನಾವು ಸಫಲರಾಗಬೇಕು. ಚಂದ್ರನ ಮೇಲೆ ಉಲ್ಕಾಶಿಲೆಗಳು ವಿಕಿರಣದಿಂದ ಸ್ಫೋಟಗೊಳ್ಳುತ್ತಲೇ ಇರುತ್ತವೆ. ನಮ್ಮ ಸೂಟ್‌ಗಳು ಉಲ್ಕಾಶಿಲೆಗಳ ಸ್ಫೋಟಗಳನ್ನು ರಕ್ಷಿಸುವಂತಿರಬೇಕು. ಇದಕ್ಕಾಗಿ ಗುರಾಣಿಯಂತಹ ರಕ್ಷಣಾ ಸಾಧನ ಬೇಕಾಗಬಹುದು.

ಈ ಎಲ್ಲಾ ಮಾಹಿತಿ ಹಾಗೂ ಸಿದ್ದತೆಗಳೊಂದಿಗೆ ನೀವು ಚಂದ್ರನ ಮೇಲೆ ವಾಸಿಸಲು ಅಪಾರ ಪ್ರಮಾಣದ ಹಣ ಬೇಕಾಗುತ್ತದೆ. ಅದಕ್ಕೂ ಮೊದಲು ನೀವು ಕಡಿಮೆ ಗುರುತ್ವಾಕರ್ಷಣೆಯಲ್ಲಿ ಹೇಗೆ ಜೀವನ ನಡೆಸಬಹುದು ಎಂಬುದಕ್ಕೆ ತರಬೇತಿ ಪಡೆಯಬೇಕು. ಒಂದಿಷ್ಟು ದಿನಗಳ ಕಾಲ ಬಾಹ್ಯಾಕಾಶ ನಿಲ್ದಾಣದಲ್ಲಿ ವಾಸಿಸಬೇಕು. ಒಟ್ಟಾರೆ ಚಂದ್ರನಲ್ಲಿ ವಾಸಿಸಲು ಆಹಾರ, ನೀರು, ವಸತಿ, ಅಗತ್ಯ ರಸಾಯನಿಕಗಳು, ಸಾಗಾಣಿಕಾ ಮತ್ತು ಪ್ರಯಾಣ ವೆಚ್ಚ ಮುಂತಾದವುಗಳಿಗಾಗಿ 1.5 ಮಿನಿಯನ್ ಹಣ ವೆಚ್ಚವಾಗಬಹುದು. ವೈಯಕ್ತಿಕವಾಗಿ ಅಷ್ಟೊಂದು ಹಣ ಭರಿಸಲು ಸಾಧ್ಯವಿದೆಯೇ? ಒಮ್ಮೆ ಯೋಚಿಸಿ ನೋಡಿ. ಅದಕ್ಕೆ ಹೇಳೋದು ದೂರದ ಚಂದ್ರ ಕಣ್ಣಿಗೆ ನುಣ್ಣಗೆ. ಸಮೀಪ ಹೋದರೆ ಕಲ್ಲು ಮುಳ್ಳುಗಳಿರುತ್ತವೆ ಅಂತ. ಇಂದಂತೂ ಯಾವಾಗಲೋ ಸಾಬೀತಾಗಿದೆ. ಫಳಫಳ ಹೊಳೆಯುವ ಚಂದ್ರ ನಮಗೆಲ್ಲಾ ಆಕರ್ಷಣೆಯ ಬಿಂದು. ಆದರೆ ಚಂದ್ರನಿಗೆ ಸ್ವಂತ ಬೆಳಕು ಇಲ್ಲ ಎಂಬುದೂ ನಮಗೆಲ್ಲಾ ಗೊತ್ತು. ಕಾರಣ ಏನೆಂದರೆ ಚಂದ್ರನ ಮೇಲ್ಮೈ ನುಣುಪಾಗಿದ್ದು, ಸೂರ್ಯನ ಬೆಳಕು ಪ್ರತಿಪಲನ ಹೊಂದುತ್ತದೆ. ಹೀಗೆ ಪ್ರತಿಫಲನಗೊಂಡ ಬೆಳಕು 1.3 ಸೆಕೆಂಡ್‌ಗಳಲ್ಲಿ ಭೂಮಿಯನ್ನು ತಲುಪುತ್ತದೆ. ಈ ಪ್ರತಿಫಲಿತ ಬೆಳಕು ನಮ್ಮನ್ನು ಆಕರ್ಷಿಸುತ್ತದೆ. ಸಮೀಪ ಹೋದಾಗಲೇ ಗೊತ್ತಾಗೋದು ಅಲ್ಲೆಲ್ಲಾ ಬರೀ ತಗ್ಗು ದಿನ್ನೆ ಕುಳಿಗಳಿವೆ ಅಂತ.

### ಚಂದ್ರನಲ್ಲಿಗೆ ಹೋಗುವ ಪ್ರಯತ್ನ ಏಕೆ?

ಚಂದ್ರನ ಮೇಲೆ ವಾಸಿಸಲು ನಾ ಮುಂದು ತಾ ಮುಂದು ಅನೇಕ ರಾಷ್ಟ್ರಗಳು ಮುಂಚೂಣಿಯಲ್ಲಿವೆ. ಪ್ರತಿದೇಶವೂ ಚಂದ್ರನಲ್ಲಿ ತಾನೆ ಮೊದಲ ನೆಲೆಯೂರಬೇಕು ಎಂದು ಜಿದ್ದಿಗೆ ಬಿದ್ದವೆ. ಇದಕ್ಕೆ ಕಾರಣವೂ ಇದೆ. ಚಂದ್ರನಲ್ಲಿ ಅಪಾರ ಪ್ರಮಾಣದ ಹೀಲಿಯಂ–3 ಇದೆ. ಚಂದ್ರನಿಗೆ ವಾತಾವರಣ ಇಲ್ಲದ ಕಾರಣ ಸೂರ್ಯನ ವಿಕಿರಣದಿಂದ ಹೀಲಿಯಂ–3 ಉತ್ಪತ್ತಿಯಾಗುತ್ತದೆ. ಶತಕೋಟಿ ವರ್ಷಗಳಿಂದ ನಡೆಯುತ್ತಿರುವ ಈ ಪ್ರಕ್ರಿಯೆಯಿಂದ ಅಪಾರ ಪ್ರಮಾಣದ ಹೀಲಿಯಂ–3 ಅಲ್ಲಿ ಸಂಗ್ರಹವಾಗಿದೆ. ಅದರಲ್ಲಿ ಕೇವಲ 100 ಕಿ.ಗ್ರಾಂನಷ್ಟು ಹೀಲಿಯಂ–3 ನ್ನು ತಂದರೆ ನಮ್ಮ ಬೆಂಗಳೂರಿಗೆ ಇಡೀ ಒಂದು ವರ್ಷಕ್ಕೆ ಬೇಕಾಗುವಷ್ಟು ವಿದ್ಯುತ್ ಬಳಸಿಕೊಳ್ಳಬಹುದು. ಈ ಕಾರಣಕ್ಕಾಗಿ ಪ್ರತಿ ದೇಶವೂ ಮೊದಲು ತಾನು ಅಲ್ಲಿ ನೆಲೆಸಿ ಈ ಸಂಪತ್ತನ್ನು ತನ್ನ ವಶಕ್ಕೆ ಪಡೆಯಬೇಕೆಂಬ ಹವಣಿಕೆಯಲ್ಲಿವೆ. ಇದಕ್ಕೆ ವಿಶ್ವಸಂಸ್ಥೆಯು ಕಡಿವಾಣ ಹಾಕಿದೆ. ಚಂದ್ರನ ನೆಲೆ ಯಾರ ಸ್ವಂತದ್ದೂ ಅಲ್ಲ. ಅದು ಅಂತರಾಷ್ಟ್ರೀಯ ಜಲ ವಲಯಗಳ ವ್ಯಾಪ್ತಿಗೆ ಒಳಪಟ್ಟಿದೆ. ಈ ಒಪ್ಪಂದದ ಪ್ರಕಾರ ಚಂದ್ರನ ಬಳಕೆ ಶಾಂತಿಯುತ ಕಾರಣಗಳಿಗೆ ಮಾತ್ರ ಸೀಮಿತವಾಗಿದೆಯೇ ಹೊರತು ಅಧಿಪತ್ಯ ಸಾಧಿಸಲು ಅಲ್ಲ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಇಂದಿನಿಂದ ಸಿ.ಬಿ.ಎಸ್.ಸಿ 10 ಮತ್ತು 12ನೇ ತರಗತಿ ಪರೀಕ್ಷೆ: ನಿಷೇದಾಜ್ಞೆ ಜಾರಿ

**■ ಹಂಪಿ ಟೈಮ್ಸ್ ಕೊಪ್ಪಳ**

ಸಿ.ಬಿ.ಎಸ್.ಸಿ 10 ಮತ್ತು 12 ನೇ ತರಗತಿ ಪರೀಕ್ಷೆಗಳು ಫೆಬ್ರವರಿ 15 ರಿಂದ ಏಪ್ರಿಲ್ 4ರ ವರೆಗೆ ಜಿಲ್ಲೆಯ ಕೊಪ್ಪಳ ಹಾಗೂ ಗಂಗಾವತಿಯ 4 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಸಿಬಿಎಸ್ಸಿ 10 ಮತ್ತು 12 ನೇ ತರಗತಿ ಪರೀಕ್ಷೆಗಳು ಕೊಪ್ಪಳ ತಾಲ್ಲೂಕಿನ ಬಹದ್ದೂರಬಂಡಿಯ ಪಿ.ಎಂ ಶ್ರೀ ಕೇಂದ್ರೀಯ ವಿದ್ಯಾಲಯ, ಕೊಪ್ಪಳ–ದದೇಗಲ್ (ಗದಗ ರಸ್ತೆಯ) ಮಿಲೆನಿಯಂ ಪಬ್ಲಿಕ್ ಸ್ಕೂಲ್ ಹಾಗೂ ಗಂಗಾವತಿ ತಾಲ್ಲೂಕಿನ ಶ್ರೀರಾಮನಗರದ ಶ್ರೀ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಮತ್ತು ಗಂಗಾವತಿಯ ಸೆಂಟ್ ಫಾಲ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್, ಈ ನಾಲ್ಕು ಪರೀಕ್ಷಾ ಕೇಂದ್ರಗಳಲ್ಲಿ ಫೆಬ್ರವರಿ 15 ರಿಂದ ಏಪ್ರಿಲ್ 4ರ ವರೆಗೆ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಜರುಗಲಿದ್ದು, ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ತಡೆಗಟ್ಟಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ರ ಅನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ವಿವಿಧ ಷರತ್ತಿಗೆ ಒಳಪಟ್ಟು ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪುಟ್ಟನ ಪರೀಕ್ಷೆ

ಪುಟ್ಟನಿಗೆ ಶುರುವಾಯ್ತು ಪರೀಕ್ಷೆ ಭಯ
ಅವನಮ್ಮ ಜೊತೆಗಿದ್ದರೆ ಪುಟ್ಟನಿಗಭಯ
ಬೆರಗಾಗಿ ನೋಡುತಿಹ ಪುಟ್ಟನು ಪುಸ್ತಕ
ಅವನಮ್ಮ ತುಂಬಿಸುತಿಹರವನ ಮಸ್ತಕ!!

ಪರೀಕ್ಷೆಯ ಭಯ ಬೇಡ ನನ್ನ ಪುಟ್ಟ ಕಂದ
ನಿನ್ನೊಂದಿಗೆ ನಾನಿರುವೆನಲ್ಲಾ ಮುಕುಂದ
ನಿನ್ನ ಜೊತೆಗಿರುವೆ ನಾ ನಿನ್ನ ಬೆನ್ನೆಲುಬಾಗಿ
ವಿದ್ಯೆ ಕಲಿತು ವಿನಯದಿ ನಡೆ ನೀ
ತಲೆಬಾಗಿ!!

ಅನುದಿನವೂ ಪುಸ್ತಕದ ಸಂಗಾತಿಯಾಗಿರು
ಜ್ಞಾನ ಸಂಪಾದನೆಯಲಿರಲಿ ನಿನ್ನ ಅಪೇಕ್ಷೆ
ಅನುದಿನದ ಪಾಠ ಅನುದಿನವೇ ಓದಿರು
ಕಠಿಣವಾಗದು ನಿನಗಾಗ ವಾರ್ಷಿಕ
ಪರೀಕ್ಷೆ!!

ಆಟದ ಜೊತೆ ಪಾಠದಲ್ಲಿರಲಿ ನಿನ್ನ ಗಮನ
ಭಯಭೀತಗೊಳ್ಳದಾಗ ನಿನ್ನ ಪುಟ್ಟ ಮನ
ಮಾಡದಿರು ಸಹಪಾಠಿಗಳ ಜೊತೆ
ಹೋಲಿಕೆ
ನಿರಂತರವಾಗಿ ಸಾಗುತಿರಲಿ ನಿನ್ನಯ
ಕಲಿಕೆ!!


ವಿದ್ಯೆಯೆಂದರೆ ಕಸಿಯಲಾಗದ ಸಂಪತ್ತು
ಪರೀಕ್ಷೆ ಬೇಡವೆಂದು ಹೇಳದಿರು ಬೇಸತ್ತು
ಪರೀಕ್ಷೆ ಎದುರಿಸಿದರೆ ನೀ ಜಾಣನಾಗುವೆ
ಸರಸ್ವತಿಯನುಗ್ರಹ ನಿನಗಿರಲೆಂದು
ಬೇಡುವೆ!!

– ಪ್ರಜ್ಞಾ ರವೀಶ್ ಕುಳಮರ್ವ,
ಕಾಸರಗೋಡು.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ಆನಂದ ಬಾಣ



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 14–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1612.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7717 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 43.787 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1587.92 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 163 ಕ್ಯುಸೆಕ್ |
| ಸಾಮರ್ಥ್ಯ | 9.379 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

15–02–2025 – ಶನಿವಾರ

| | |
|---|---|
| ತಿಥಿ | : ತೃತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರ ಫಾಲ್ಗುಣಿ |
| ಯೋಗ | : ಸುಕರ್ಮ |
| ಕರಣ | : ವಾಣಿಜ |
| ಸೂರ್ಯೋದಯ | : 07:00:31 |
| ಸೂರ್ಯಾಸ್ತ | : 18:21:50 |
| ರಾಹು ಕಾಲ | : 09:51–11:16 |
| ಯಮಘಂಡ ಕಾಲ | : 14:06–15:32 |
| ಗುಳಿಕ ಕಾಲ | : 07:01–08:26 |

ಡಿಎಚ್‌ಒ ಡಾ.ಯಲ್ಲಾ ರಮೇಶ ಬಾಬು ಹೇಳಿಕೆ । 45 ವರ್ಷ ಮೇಲ್ಪಟ್ಟ ಬಿಪಿಎಲ್ ಕುಟುಂಬಗಳ ನಾಗರಿಕರಿಗೆ

# ಉಚಿತ ದಂತಪಂಕ್ತಿ ಜೋಡಣೆ

## ಸರ್ಕಾರದ ದಂತಭಾಗ್ಯ ಸೌಲಭ್ಯ ಪಡೆಯಿರಿ । ಆರೋಗ್ಯಕರ ಬಾಯಿ ಕಾಪಾಡಿಕೊಳ್ಳಿ




■ ಹಂಪಿ ಟೈಮ್ಸ್ ಬಳ್ಳಾರಿ

ಬಾಯಿ ಆರೋಗ್ಯ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಗೆ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯವಿದ್ದು, ಸಾರ್ವಜನಿಕರು ಸದು ಪಯೋಗ ಪಡೆದು ಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ ಬಾಬು ಅವರು ಹೇಳಿದರು.

ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮ ದಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾ ಲಯದ ಸಭಾಂಗಣದಲ್ಲಿ ವೈದ್ಯಾಧಿಕಾ ರಿಗಳು ದಂತ ವೈದ್ಯರಿಗೆ ಶುಕ್ರವಾರ ಏರ್ಪಡಿಸಿದ್ದ ಮಾಹಿತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮನುಷ್ಯನ ದೇಹದ ಅಂಗಗಳಲ್ಲಿ ಬಾಯಿಯು ಸೂಕ್ಷ್ಮ ಮಹತ್ವ ಹೊಂದಿದ್ದು, ಸಾರ್ವಜನಿಕರಿಗೆ ಹೆಚ್ಚಿನ ಜಾಗೃತಿಯ ಮೂಲಕ ಆರೋಗ್ಯಕರ ಬಾಯಿ ಕಾಪಾಡಿಕೊಳ್ಳುವಂತೆ ತಿಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಜಿಲ್ಲೆಯಾದ್ಯಂತ ಪ್ರತಿ ಮಂಗಳವಾರ ದಂತ ವೈದ್ಯ ಮಹಾವಿದ್ಯಾಲಯದ ಸಹಯೋಗ ದಲ್ಲಿ ಒಂದು ಆರೋಗ್ಯ ಕೇಂದ್ರದಂತೆ ಉಚಿತ ಶಿಬಿರ ಹಮ್ಮಿಕೊಳ್ಳುವ ಕುರಿತು ಸಿದ್ಧತೆ ಮಾಡಿಕೊಳ್ಳಲಾ ಗುತ್ತಿದ್ದು, ಪ್ರತಿ ಯೊಬ್ಬ ಅರ್ಹ ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು ಎಂದು ಸೂಚಿಸಿದರು.

**ದಂತಭಾಗ್ಯ:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ದಂತಭಾಗ್ಯ ಯೋಜನೆಯಡಿ 45 ವರ್ಷ ಮೇಲ್ಪಟ್ಟ ಬಿಪಿಎಲ್ ಕುಟುಂಬಗಳ ನಾಗರಿಕರಿಗೆ ಉಚಿತ ದಂತ ಪಂಕ್ತಿಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಪರೀಕ್ಷಿಸಿ, ಬಳ್ಳಾರಿ ಯ ಸರ್ಕಾರಿ ದಂತ ಮಹಾವಿದ್ಯಾಲಯಲ್ಲಿ ಅಳವಡಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಬಾಯಿ ಅರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ವಿಶಾಲಾಕ್ಷಿ ಅವರು ಮಾತನಾಡಿ, ಜಿಲ್ಲೆಯ ಎಲ್ಲ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದಂತ ವೈದ್ಯರು, ಹುಳುಕಾದ, ಅಲುಗಾಡುತ್ತಿರುವ, ಹಲ್ಲು ಕೀಳುವ, ದಂತ ಕುಳಿ ಶುಚಿಗೊಳಿಸಿ ಸಿಮೆಂಟ್ ತುಂಬುವ ಕಾರ್ಯ ಮಾಡುವ ಜೊತೆಗೆ ಇತರೆ ಬಾಯಿ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ.ಆರ್., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ., ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರ ಕುಮಾರ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಹನುಮಂತಪ್ಪ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿಎನ್‌ಓ ಗಿರೀಶ್ ಸೇರಿದಂತೆ ವೈದ್ಯಾಧಿಕಾರಿಗಳು, ದಂತ ವೈದ್ಯರು ಉಪಸ್ಥಿತರಿದ್ದರು.

# ಆಸ್ತಿ ತೆರಿಗೆ ಪಾವತಿಸಲು ಸೂಚನೆ

## ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ಸೂಚನೆ । ಆಸ್ತಿ ಗಣಕೀರಕರಣ ಮಾಡಿಕೊಳ್ಳಿ

■ ಹಂಪಿ ಟೈಮ್ಸ್ ಕಂಪ್ಲಿ

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಕಟ್ಟಡ, ನಿವೇಶನ ಹೊಂದಿರುವ ಆಸ್ತಿ ಮಾಲೀಕರು ಕಡ್ಡಾಯವಾಗಿ ತಮ್ಮ ಆಸ್ತಿ ತೆರಿಗೆ ಪಾವತಿಸಬೇಕು ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿಯವರು ತಿಳಿಸಿದ್ದಾರೆ.

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಾಗ, ಅರೆ ಸರ್ಕಾರಿ, ಸ್ಥಳೀಯ ಸಂಸ್ಥೆಗಳ ಒಡೆತನದಲ್ಲಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನುಳಿದ ಕಟ್ಟಡ, ನಿವೇಶನಗಳ ಮಾಲೀಕರು ತಮ್ಮ ಆಸ್ತಿಗಳ ಆಸ್ತಿ ತೆರಿಗೆ ಪಾವತಿಸಬೇಕು

ಸಂಬಂಧಿಸಿದ ಪೂರಕ ನೋಂದಾಯಿತ ದಾಖಲೆ ಪತ್ರಗಳು, ಸ್ವತ್ತಿನ ಭಾವಚಿತ್ರ, ಮಾಲೀಕರ ಫೋಟೋ, ನಮೂನೆ–15, ವಿದ್ಯುತ್ ಬಿಲ್, ಕುಡಿಯುವ ನೀರಿನ ಬಿಲ್, ಕಟ್ಟಡ ಪರವಾನಗಿ ಮತ್ತು ಅನುಮೋದಿತ ನಕ್ಷೆ, ನಿವೇಶನ ವಿನ್ಯಾಸ ಅನುಮೋದನೆ ಅಥವಾ ಅನುಮೋದಿತ ಬಡಾವಣೆಯ ನಕ್ಷೆ, ಆರ್‌ಟಿಸಿ, ಮ್ಯೂಟೇಶನ್ ನಕಲು ಪ್ರತಿ, ಮಾಲೀಕರ ಆಧಾರ್ ಕಾರ್ಡ್ ಪ್ರತಿ, ಮಾಲೀಕರ ಪಾನ್ ಕಾರ್ಡ್ ಪ್ರತಿ ಅಥವಾ ಚುನಾವಣಾ ಗುರುತಿನ ಚೀಟಿ ಹಾಗೂ ಇತರೆ ಅವಶ್ಯಕ ದಾಖಲಾತಿಗಳನ್ನು ಪುರಸಭೆ ಕಚೇರಿಗೆ ಸಲ್ಲಿಸಿ ಸ್ವತ್ತಿಗೆ ಸಂಬಂಧಪಟ್ಟ ತೆರಿಗೆ ಪಾವತಿಸಬೇಕು.

ಆಸ್ತಿಯನ್ನು ಗಣಕೀಕರಿಸಿಕೊಂಡು ನಮೂನೆ–3, ನಮೂನೆ–3ಎ ಪಡೆದುಕೊಂಡು ನೋಂದಾಯಿತ ಕಚೇರಿಯಲ್ಲಿ ಕ್ರಯ ಪತ್ರ, ದಾನ ಪತ್ರ, ವಿಭಾಗ ಪತ್ರ ಹಕ್ಕು, ಖುಲಾಸೆ ಹಾಗೂ ಇತರೆ ದಾಖಲೆ ಪತ್ರ ನೋಂದಣಿ ಮಾಡಿಸಿಕೊಂಡು ಸರ್ಕಾರದ ಸೌಲಭ್ಯ ಪಡೆದುಕೊಳ್ಳಬಹುದು.

ತಪ್ಪಿದಲ್ಲಿ ಸಂಬಂಧಪಟ್ಟ ಆಸ್ತಿ ಮಾಲೀಕರುಗಳಿಗೆ ನಿಯಮ 10ಎ ರಂತೆ ನಿಯಮಾನುಸಾರ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಂಪ್ಲಿ ಪುರಸಭೆಯ ಮುಖ್ಯಾಧಿಕಾರಿಗಳ ಕಚೇರಿ, ಕಂದಾಯ ಶಾಖೆಯ ಕಂದಾಯಅಧಿಕಾರಿಅಥವಾಮೊ.9886362003, 9916907008, 9845509950 ಗೆ ಸಂಪರ್ಕಿಸ ಬಹುದು ಎಂದು ಮುಖ್ಯಾಧಿಕಾರಿ ತಿಳಿಸಿದ್ದಾರೆ.

# ಐದು ತಲೆಮಾರುಗಳಿಂದ ಕುವೆಂಪು ಅವರ ಜಾತ್ಯತೀತ ಮೌಲ್ಯಗಳು ಸಮಾಜವನ್ನು ತಿದ್ದುತ್ತಲಿವೆ

## ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಮತ । ಹುಣ್ಣಿಮೆ ಬೆಳದಿಂಗಳೋತ್ಸವ



■ ಹಂಪಿ ಟೈಮ್ಸ್ ಸಕಲೇಶಪುರ

ಐದು ತಲೆಮಾರುಗಳಿಂದ ಕುವೆಂಪು ಅವರ ಜಾತ್ಯತೀತ ಮೌಲ್ಯಗಳು ಸಮಾಜವನ್ನು ತಿದ್ದುತ್ತಲೇ, ಪ್ರಭಾವಿಸುತ್ತಲೇ ಇವೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ನುಡಿದರು.

ಸಕಲೇಶಪುರದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ವತಿಯಿಂದ ಆಯೋಜಿಸಿದ್ದ 125ನೇ ಶತೋತ್ತರ ಹುಣ್ಣಿಮೆ ಬೆಳದಿಂಗಳೋತ್ಸವ ಕಾರ್ಯಕ್ರಮದಲ್ಲಿ ಸಂಸ್ಥಾನ ಕೊಡ ಮಾಡುವ ಕುವೆಂಪು ಪ್ರಶಸ್ತಿಯನ್ನು ಆದಿ ಚುಂಚನಗಿರಿ ಮಹಾ ಸಂಸ್ಥಾನದ ಶ್ರೀ ಶ್ರೀ ನಿರ್ಮಲಾನಂದ ಶ್ರೀಗಳಿಂದ ಸ್ವೀಕರಿಸಿ ಮಾತನಾಡಿದರು. ವಿಶ್ವಮಾನವ ಸಂದೇಶ ಮತ್ತು ಜಾತ್ಯತೀತ ಮೌಲ್ಯಗಳಿಂದ ಐದು ತಲೆಮಾರುಗಳನ್ನು ಪ್ರಭಾವಿಸಿದ ರಾಷ್ಟ್ರಕವಿ ಕುವೆಂಪು ಹೆಸರಿನ ಪ್ರಶಸ್ತಿ ಸ್ವೀಕರಿಸುತ್ತಿರುವುದು ನನಗೆ ಬಹಳ ದೊಡ್ಡ ಹೆಮ್ಮೆಯ ಸಂಗತಿ.

ಅದರಲ್ಲೂ ಆದಿಚುಂಚನಗಿರಿ ಮಹಾಸಂಸ್ಥಾನದ ಜ್ಞಾನಯೋಗಿ ನಿರ್ಮಲಾನಂದ ಶ್ರೀಗಳ ಕೈಗಳಿಂದ ಈ ಪ್ರಶಸ್ತಿ ಸ್ವೀಕರಿಸುವ ಧನ್ಯತೆ ಇಂದು ನನ್ನದಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಕುವೆಂಪು ಅವರು ಕೇವಲ ಶ್ರೇಷ್ಠ ಸಾಹಿತಿ ಮಾತ್ರವಲ್ಲ, ನೂರಾರು ಮಂದಿ ಶ್ರೇಷ್ಠ ಸಾಹಿತಿಗಳನ್ನು ರೂಪಿಸಿದವರು. ಕುವೆಂಪು ಅವರು ಕೇವಲ ವೈಚಾರಿಕ ಕ್ರಾಂತಿಗೆ ಕರೆ ನೀಡಲಿಲ್ಲ, ಬದಲಿಗೆ ನೂರಾರು ವಿಚಾರವಾದಿಗಳನ್ನು ಸೃಷ್ಟಿಸಿದವರು ಎಂದು ವಿಶ್ಲೇಷಿಸಿದರು.

ಕುವೆಂಪು ಅವರು ಕನ್ನಡದ ಸಾಹಿತ್ಯ ಸಂಸ್ಕೃತಿ ನಿರ್ಮಾಣ ಮಾಡಿದಷ್ಟೇ ಪರಿಣಾಮಕಾರಿಯಾಗಿ

ತಮ್ಮ ಕಾವ್ಯಗಳ ಮೂಲಕ ಸ್ವಾತಂತ್ರ್ಯ ಚಳವಳಿಗೆ ಯುವ ಸಮೂಹವನ್ನು ಸಜ್ಜುಗೊಳಿಸಿ ಈ ನೆಲದ ಸ್ವತಂತ್ರಕ್ಕೆ ಅಳಿಸಲಾಗದ ಸಾಂಸ್ಕೃತಿಕ ಕೊಡುಗೆ ನೀಡಿದ ಕ್ರಾಂತಿಕಾರಿ ಎಂದರು.

ವಿಶ್ವ ವಿದ್ಯಾಲಯಗಳು ಹೇಗಿರಬೇಕು, ಜ್ಞಾನ ಪ್ರಸಾರ ಹೇಗಿರಬೇಕು ಎನ್ನುವ ಮಾದರಿಯನ್ನು ನಾಡಿಗೆ ಹಾಕಿಕೊಟ್ಟವರಲ್ಲಿ ಕುವೆಂಪು ಅವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ಸಮುದಾಯ ವಿಮರ್ಷೆ ಮೂಲಕ ಮಡಿವಂತ ಸಮಾಜವನ್ನು ತಿದ್ದಿದವರು ಕುವೆಂಪು ಎಂದು ಬಣ್ಣಿಸಿದರು.

ನಿರಂಕುಶಮತಿಗಳಾಗಿ ಎಂದು ಕರೆ ಕೊಡುವ ಮೂಲಕ ಐದು ತಲೆಮಾರುಗಳಿಂದ ಸ್ವತಂತ್ರ ಆಲೋಚನೆ ರೂಪಿಸಲು, ಆ ಮೂಲಕ ಐದು ತಲೆಮಾರುಗಳಿಂದ ಜಾತ್ಯತೀತ ಸಮುದಾಯವನ್ನು ರೂಪಿಸುತ್ತಲೇ ಇರುವ ಕುವೆಂಪು ಅವರು ಇವತ್ತಿಗೂ, ಎಂದೆಂದಿಗೂ ಪ್ರಸ್ತುತರಾಗಿದ್ದಾರೆ. ಹೀಗಾಗಿ ಕುವೆಂಪು ಪ್ರಜ್ಞೆ ಕನ್ನಡ ನೆಲದಲ್ಲಿ ನಿರಂತರವಾಗಿ ಬೆಳೆಯುತ್ತಲೇ ಇದೆ. ಈ ಮಹಾನ್ ಚೇತನದ ಹೆಸರಿನ ಪ್ರಶಸ್ತಿಯನ್ನು ನಾಥ ಪಂಥದ ಮಹಾನ್ ತೇರನ್ನು ಎಳೆಯುತ್ತಿರುವ ಶ್ರೀ ಶ್ರೀ ನಿರ್ಮಲಾನಂದ ಶ್ರೀಗಳಿಂದ ಸ್ವೀಕರಿಸುತ್ತಿರುವುದು ಒಂದು ಧನ್ಯತೆಯ ಕ್ಷಣ ಎಂದರು.

ಮಹಾಸಂಸ್ಥಾನದ ಹಾಸನ ಶಾಖಾಮಠದ ಶಂಭುನಾಥ ಶ್ರೀಗಳು, ಹಾಸನ ಪತ್ರಕರ್ತರ ಸಂಘದ ಅಧ್ಯಕ್ಷರಾದ ಮದನ್ ಗೌಡರು, ತೆಂಗಿನ ನಾರು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ನಟರಾಜ್ , ಬಾಲ ಭವನ ಅಧ್ಯಕ್ಷರಾದ ಬಿ. ಆರ್.ನಾಯ್ಡು ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

# ಸರ್ವಧರ್ಮ ರಥೋತ್ಸವ ಪೂರ್ವಭಾವಿ ಸಭೆ ಫೆ.16

■ ಹಂಪಿ ಟೈಮ್ಸ್ ಹೊಸಪೇಟೆ



ನಗರದಲ್ಲಿ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಿಂದ ಮಾ.10 ನಡೆಯಲಿರುವ ಸರ್ವಧರ್ಮ ಸಮನ್ವಯ ರಥೋತ್ಸವ–2025ರಂಗವಾಗಿ ಫೆ.16 ರಂದು ಸಂಜೆ 5.30ಕ್ಕೆ ನಗರದ ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಪೂರ್ವಭಾವಿ ಸಮಾಲೋಚನಾ ಸಭೆ ಜರುಗಲಿದೆ.

ಮಠದ ಹಿರಿಯರು, ಸಂಘ ಸಂಸ್ಥೆಗಳ ಅಧ್ಯಕ್ಷರುಗಳು, ಸರ್ವಧರ್ಮಗಳ ಸಮಸ್ತ ಅಭಿಮಾನಿ ಸದ್ಭಕ್ತರು ಆಗಮಿಸಿ ಪ್ರವಚನ ಮತ್ತು ರಥೋತ್ಸವ ಯಶಸ್ವಿಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕೆಂದು ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳಿ ತಿಳಿಸಿದ್ದಾರೆ.

# ಆಕ್ಸ್‌ಫರ್ಡ್ ಕಿರಿಯ ಪ್ರಾಥಮಿಕ ಶಾಲೆಯ 11ನೇ ವಾರ್ಷಿಕೋತ್ಸವ

■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ಕೊಂಡನಾಯಕನಹಳ್ಳಿ ಸಮೀಪದ ಆಕ್ಸಫರ್ಡ್ ಕಿರಿಯ ಪ್ರಾಥಮಿಕ ಶಾಲೆಯ 11 ವಾರ್ಷಿಕೋತ್ಸವ ಫೆ.15 ರಂದು ಸಂಜೆ 5ಕ್ಕೆ ಶಾಲಾ ಆವರಣದಲ್ಲಿ ಜರುಗಲಿದೆ.

ಸುಳೇಕಲ್ ಶ್ರೀಆದಿಶಕ್ತಿ ಶಾಂಭವಿ ಬೃಹನ್ಮಠದ ವೇ.ಪದ್ಮಾಕ್ಷರಯ್ಯ ಸ್ವಾಮಿಗಳು, ನಗರಗಡ್ಡಿ ಮಠದ ಶ್ರೀ ಶಾಂತಲಿಂಗೇಶ್ವರ ಮಹಾಸ್ವಾಮಿಗಳೂ ಸಾನ್ನಿಧ್ಯವಹಿಸುವರು. ಪಿಡಿಒ ಹನುಮಂತಪ್ಪ ಕಂಬಾರ ಉದ್ಘಾಟಿಸಲಿದ್ದಾರೆ. ಮಂಗಳೂರು ಗ್ರಾ.ವಿ.ವಿ.ಚಾ.ಟ್ರಸ್ಟ್ ಕಾರ್ಯದರ್ಶಿ ಕೊಟ್ರೇಶ್ ಬಂಡ್ರಕಲ್ ಅಧ್ಯಕ್ಷತೆವಹಿಸುವರು. ಕ್ಲಸ್ಟರ್ ಸಿಆರ್‌ಪಿ ಅರುಂದತಿ, ನಗರಸಭೆ ಸದಸ್ಯರು, ಮಲಪನಗುಡಿ ಗ್ರಾಪಂ ಸದಸ್ಯರು ಉಪಸ್ಥಿತರಿರಲಿದ್ದಾರೆ. ರಂಗಕಲಾವಿದ ಜೂನಿಯರ್ ಉಪೇಂದ್ರ ಗವೀಶ ಮಂಗಳೂರು ಮತ್ತು ರಂಗಭೂಮಿ ಕಲಾವಿದ ಮಹಾದೇವ ಪಾಲ್ಗೊಳ್ಳಿದ್ದಾರೆ ಎಂದು ಶಾಲೆ ಮುಖ್ಯಸ್ಥರು ತಿಳಿಸಿದ್ದಾರೆ.

# ಪ್ರಶಸ್ತಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನಲ್ಲಿ ಏ.05 ರಂದು ರಂದು ಡಾ.ಬಾಬು ಜಗಜೀವನ ರಾಂ ಅವರ 118ನೇ ಜನ್ಮ ದಿನಾಚರಣೆ ಮತ್ತು ಏ.14 ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆಯ ಅಂಗವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳಿಗೆ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ನಗರದ ಕೌಲ್ ಬಜಾರ್‌ನ 1ನೇ ಗೇಟ್‌ನ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಇದೇ ಕಚೇರಿಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಫೆ.25 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.9480843073 ಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ. 16 ವಿವಿಧೆಡೆ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆಯ ನಗರದ 110/11 ಕೆವಿ ಉಪ ವಿಭಾಗ–2 ರ 11ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕೆಲಸ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಫೆ. 16 ರಂದು ಹೊಸಪೇಟೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.



ಫೆ. 16 ರಂದು ಭಾನುವಾರ ಬೆ.9 ಗಂಟೆಯಿಂದ ಸ.5 ಗಂಟೆಯವರೆಗೆ 11 ಕೆವಿ ಫೀಡರ್ ಗಳಾದ ನಗರ ರಾಮ, ಜಂಬುನಾಥ ಗುಡಿ, ಕೆ. ಓ. ಎಫ್, ಎಮ್. ಪಿ. ಪ್ರಕಾಶ ನಗರ, ವಿಜಯನಗರ, ಸಂಕ್ಲಾಪುರ, ಟಿ. ಎಸ್. ಪಿ, ಎನ್. ಸಿ. ಕಾಲೋನಿ ರಾಜಪುರ (ಎನ್. ಜೆ. ವೈ), ಬಸವನದುರ್ಗ(ಎನ್. ಜೆ. ವೈ), ಬಿ. ವಿ. ಗೇರಿ(ಐ.ಪಿ), ಕಲ್ಲಹಳ್ಳಿ(ಐ.ಪಿ), ಎಫ್–17 ವಡ್ಡರಹಳ್ಳಿ ವ್ಯಾಪ್ತಿಗೆ ಒಳಪಡುವ ಸುತ್ತಮುತ್ತಲಿನ ಪ್ರದೇಶಗಳಾದ ಬಳ್ಳಾರಿ ರಸ್ತೆ, ಶಿರ್ಶಿನಕಲ್ಲು, ನಿಯಾಜಿ ನಗರ, ಅಜಾದ್ ನಗರ, ಈಶ್ವರ ನಗರ, ಉಕ್ಕಡಕೇರಿ, ಜೆ.ಪಿ.ನಗರ, , ಅರವಿಂದ ನಗರ, , ಬಸ್ ಡಿಪೊಏರಿಯಾ, ಸಾಯಿ ಕಾಲೋನಿ, ಹಂಚಿನಗುಡಿ, ಕೊಂಡನಾಯಕನಹಳ್ಳಿ, ಅನಂತಶಯನಗುಡಿ, ಸಂಕ್ಲಾಪುರ ಇಂಡಸ್ಟ್ರಿಯಲ್ ಏರಿಯಾ, ಕರ್ನಾಟಕ ಆಯಿಲ್ ಪ್ಯಾಕ್ಟರಿ ಏರಿಯಾ, ಕಾರಿಗನೂರು, ವಿನಾಯಕ ನಗರ, ಆಕಾಶವಾಣಿ, ಪಾರ್ವತಿ ನಗರ, ವಾಲ್ಮೀಕ ನಗರ, ಸಂಡೂರು ರೋಡ್, ರಾಮ ಟಾಕೀಸ್ ಏರಿಯಾ, ಚಲುವಾದಿ ಕೇರಿ, ಉಕ್ಕಡಕೇರಿ, ಚಿತ್ರಕೇರಿ, ಮ್ಯಾಸಕೇರಿ, ಬಾಣದಕೇರಿ, ಜಂಬುನಾಥ ಹಳ್ಳಿ, ಕಾರಿಗನೂರು, ಮಾರುತಿ ಕಾಲೋನಿ, ಸಂಕ್ಲಾಪುರ, ಸಾಯಿಬಾಬಾ ಗುಡಿ ಏರಿಯಾ, ಡ್ಯಾಮಾ ರೋಡ್, ಟಿ. ಬಿ. ಡ್ಯಾಂ, ಎನ್. ಸಿ. ಕಾಲೋನಿ, ಗಾಂಧೀ ಕಾಲೋನಿ, ಗೋಕುಲ ನಗರ, ನಿಶಾನಿ ಕ್ಯಾಂಪ, ಕಲ್ಲಹಳ್ಳಿ, ರಜಾಪುರ, ಜಿ.ಜಿ ಕ್ಯಾಂಪ, ಕಣಿವೆರಾಯನಗುಡಿ, ವ್ಯಾಸನಕೇರಿ, ಕಾಕುಬಾಳು, ಗುಂಡ್ಲುವದ್ದಿಗೇರಿ, ಪಿ.ಕೆ ಹಳ್ಳಿ, ನಾಗೇನಹಳ್ಳಿ, ಬಸವನದುರ್ಗ, ಹೊಸುರು, ಇಪ್ಪಿತೇರಿ ಮಾಗಣಿ, ನರಸಾಪುರ, ಡಾಣಾಪುರ, ಶುಭ್ ಲಾಭ್ ಕೈಗಾರಿಕೆಗಳು, ವಡ್ಡರಹಳ್ಳಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಅವರು ಕೋರಿದ್ದಾರೆ.

# ಫೆ.16ಬಳ್ಳಾರಿಯಲ್ಲಿ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯ 220/110/11ಕೆ.ವಿ ಅಲ್ಲಿಪುರ ವಿದ್ಯುತ್ ಉಪ–ಕೇಂದ್ರದಲ್ಲಿ ವಿದ್ಯುತ್ ಪರಿವರ್ತಕ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಫೆ.16 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 04 ಗಂಟೆಯವರೆಗೆ 11ಕೆ.ವಿ ಮಾರ್ಗಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಗರ ಉಪವಿಭಾಗ–2ರ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ರಾಜಕೀಯಕ್ಕಿಂತಲೂ ಅಭಿವೃದ್ಧಿಗೆ ಆದ್ಯತೆ

**ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಅಭಿಮತ | ಮುಕ್ತಿವಾಹನ, ವಿವಿಧ ಕಾಮಗಾರಿಗೆ ಚಾಲನೆ | ಸರ್ವರ ಸಹಕಾರದಿಂದ ನಿರೀಕ್ಷಿತ ಅಭಿವೃದ್ಧಿ**

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸರ್ವರ ಸಹಕಾರದಿಂದ ಪುರಸಭೆ ವ್ಯಾಪ್ತಿಯಲ್ಲಿ ನಿರೀಕ್ಷಿತ ವೇಗದಲ್ಲಿ ಅಭಿವೃದ್ಧಿ ಕಾರ್ಯಗಳು ಮುಂದುವರಿದಿದ್ದು, ಜನರ ನಿರೀಕ್ಷೆ ಉಳಿಸಿಕೊಳ್ಳಲಾಗುತ್ತಿದೆ ಎಂದು ಪುರಸಭೆ ಅಧ್ಯಕ್ಷ ಎಂ. ಮರಿರಾಮಣ್ಣ ತಿಳಿಸಿದರು.



ಪಟ್ಟಣದ ಪುರಸಭೆ ಕಚೇರಿಯಲ್ಲಿ ಮುಕ್ತಿವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು. ಮುಕ್ತಿವಾಹನಕ್ಕೆ ಹಲವು ವರ್ಷಗಳಿಂದಲೂ ಜನರ ಬೇಡಿಕೆ ಗಮನಿಸಿ ಈ ಹಿಂದಿನ ಶಾಸಕ ಎಸ್.ಭೀಮನಾಯ್ಕ ಇವರು ಮುಕ್ತಿವಾಹನ ಸೌಲಭ್ಯ ಕಲ್ಪಿಸಲು ಹೆಚ್ಚು ಆಸಕ್ತಿವಹಿಸಿದ್ದರು. ಇದೀಗ ಪುರಸಭೆಯ 25 ಲಕ್ಷ ರೂ ಅನುದಾನದಲ್ಲೆ ಮುಕ್ತಿವಾಹನಕ್ಕೆ ಚಾಲನೆ ನೀಡಲಾಗಿದ್ದು, ಅತ್ಯಂತ ಕಡಿಮೆ ಬಾಡಿಗೆಯಲ್ಲಿ ಮುಕ್ತಿವಾಹನ ಒದಗಿಸಲಾಗುವುದು. ಕಡುಬಡವರಿದ್ದರೆ ವೈಯಕ್ತಿಕ ಮೊತ್ತದಲ್ಲೆ ಮುಕ್ತಿ ವಾಹನದ ಬಾಡಿಗೆ ಬರಿಸಲೂ ಸಿದ್ಧವಾಗಿರುವೆ ಎಂದರು.

ಪಟ್ಟಣದಲ್ಲಿ ಪೇ ಅಂಡ್ ಯೂಸ್ ಶೌಚಾಲಯಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿ, ಮುಕ್ತಿವಾಹನದ ಸೇವೆಗೆ ಕನಿಷ್ಠ ಬಾಡಿಗೆ ಕುರಿತಂತೆ ಸಭೆಯಲ್ಲಿ ಚರ್ಚಿಸಿ ನಿರ್ಧರಿಸಲಾಗುವುದು. ಪಕ್ಷಾತೀತವಾಗಿ ಪುರಸಭೆ ವ್ಯಾಪ್ತಿಯ ಪ್ರತಿ ವಾರ್ಡಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಆದರೆ, ಕೆಲ ಸದಸ್ಯರು ಪಕ್ಷಪಾತಕ್ಕೆ ಎಡೆ ಮಾಡಿಕೊಡುತ್ತಿದ್ದು, ಇದು ಅಭಿವೃದ್ಧಿಗೆ ಪೂರಕವಾಗಿಲ್ಲ. ನಮ್ಮ ನಾಯಕರಾದ ಭೀಮನಾಯ್ಕ ಅವರು ಪಕ್ಷಪಾತವಿಲ್ಲದೆ ಕಾರ್ಯ ನಿರ್ವಹಿಸುವಂತೆ ಸೂಚಿಸಿದ್ದಾರೆ. ಆದರೆ, ಕೆಲ ಸದಸ್ಯರು ಅನಗತ್ಯವಾಗಿ ರಾಜಕೀಯ ಎಳೆ ತರುತ್ತಿದ್ದು, ಇದೊಂದು ಉತ್ತಮ ಬೆಳವಣಿಗೆಯಲ್ಲ. ರಾಜಕೀಯಕ್ಕಿಂತಲೂ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಪರೋಕ್ಷವಾಗಿ ಕೆಲ ಸದಸ್ಯರ ವಿರುದ್ಧ ಹರಿಹಾಯ್ದರು. ಬಳಿಕ ಪಟ್ಟಣದ 4ನೇ ವಾರ್ಡ್‌ನಲ್ಲಿ ಒಟ್ಟು 15.20 ಲಕ್ಷ ರೂ.ಅಂದಾಜು ಮೊತ್ತದಲ್ಲಿ ಒಟ್ಟು 2 ಪೇ ಅಂಡ್ ಯೂಸ್ ಶೌಚಾಲಯ ಉದ್ಘಾಟಿಸಿದರು. ರಾಮನಗರ ಶಾಲೆಯಲ್ಲಿ 3 ಲಕ್ಷ ರೂ. ಅಂದಾಜು ಮೊತ್ತದಲ್ಲಿ 15ನೇಹಣಕಾಸು ಯೋಜನೆಯಡಿ ಕುಡಿವ ನೀರಿನ ಕಾಮಗಾರಿಗೆ ಚಾಲನೆ ನೀಡಿದರು.

> ಅತ್ಯಂತ ಕಡಿಮೆ ಬಾಡಿಗೆ ಯಲ್ಲಿ ಮುಕ್ತಿ ವಾಹನ ಒದಗಿಸಲಾಗುವುದು. ಕಡುಬಡವರಿದ್ದರೆ ವೈಯಕ್ತಿಕ ಮೊತ್ತದಲ್ಲೆ ಮುಕ್ತಿ ವಾಹನದ ಬಾಡಿಗೆ ಭರಿಸಲೂ ಸಿದ್ಧ. ಪಕ್ಷಾತೀತವಾಗಿ ಪುರಸಭೆ ವ್ಯಾಪ್ತಿಯ ಪ್ರತಿ ವಾರ್ಡಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು.
>
> 
>
> ಎಂ.ಮರಿರಾಮಣ್ಣ
> ಅಧ್ಯಕ್ಷರು, ಪುರಸಭೆ.ಹ.ಬೊ.ಹಳ್ಳಿ

ಪುರಸಭೆ ಉಪಾಧ್ಯಕ್ಷೆ ಅಂಬಿಕಾ ದೇವೇಂದ್ರಪ್ಪ, ಸದಸ್ಯರಾದ ಪವಾಡಿ ಹನುಮಂತಪ್ಪ, ಮಂಜುಳಾ ಕೃಷ್ಣನಾಯ್ಕ, ನವೀನ್ ಕುಮಾರ್, ಜೋಗಿ ಹನುಮಂತಪ್ಪ, ತ್ಯಾವಣಗಿ ಕೊಟ್ರೇಶ್, ಬಾಳಪ್ಪ, ಮಾಜಿ ಸದಸ್ಯ ಅಲ್ಲಾಭಕ್ಷಿ, ಪುರಸಭೆ ಮುಖ್ಯಾಧಿಕಾರಿ ಪ್ರಭಾಕರ ಪಾಟೀಲ್, ಎಇಇ ಹುಸೇನ್ ಬಾಷಾ, ಗ್ರಾ.ಪಂ. ಮಾಜಿ ಅಧ್ಯಕ್ಷ ಜಿ.ಹನುಮಂತಪ್ಪ, ಮುಖಂಡ ವಿಜಯಕುಮಾರ್ ಇತರರಿದ್ದರು.

## ತುಂಬಿದ ಕೊಡ ತುಳುಕಿತಲೇ ಪರಾಕ್



ಮೊದಲ ಪುಟದಿಂದ

ಗೊರವಪ್ಪ ಸಂಜೆ 5.27 ಕ್ಕೆ ಬಿಲ್ಲನ್ನೇರಿ ಸದ್ದಲೇ ಎನ್ನುತ್ತಿದ್ದಂತೆ ನೆರೆದವರೆಲ್ಲ ನಿಶ್ಯಬ್ದವಾದರು. ಕೆಲವೇ ಸೆಕೆಂಡುಗಳಲ್ಲಿ ಆಕಾಶ ವೀಕ್ಷಿಸಿ ಕಾರಣಿಕ ನುಡಿದು ಬೀಳುತ್ತಿದ್ದ ರಾಮಪ್ಪನನ್ನು ಗೊರವ ಸಮೂಹ ಎತ್ತಿ ಹಿಡಿದರು. ಡೆಂಕನಮರಡಿಯಲ್ಲಿ ಭಾಗಿಯಾದ ಲಕ್ಷಾಂತರ ಭಕ್ತಗಣ ಕಾರಣಿಕ ಮುಕ್ತಾಯ ಬಳಿಕ ರಸ್ತೆಯಲ್ಲಿ ಜನದಟ್ಟಣೆ ಹೆಚ್ಚಾಗಿ, ವಾಹನ ಸಂಚಾರಕ್ಕೆ ಸ್ವಲ್ಪ ಹೊತ್ತು ಅಡಚಣೆ ಉಂಟಾಗಿತ್ತು. ಕಾರಣಿಕದಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತಾದಿಗಳು ಕಾರ್ಣಿಕೋತ್ಸವದಲ್ಲಿ ಭಾಗಿಯಾಗಿದ್ದರು. ಈ ವೇಳೆ ಕಾಗಿನೆಲೆ ಶ್ರೀನಿರಂಜನಾನಂದಪುರಿ ಸ್ವಾಮೀಜಿ, ಬಳ್ಳಾರಿ ಸಂಸದ ಈ.ತುಕರಾಮ್, ಹೂವಿನ ಹಡಗಲಿ ಶಾಸಕ ಕೃಷ್ಣನಾಯ್ಕ್, ಐಜಿಪಿ ಲೋಕೇಶ್, ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಎಸ್ಪಿ ಬಿ.ಎಲ್ .ಶ್ರೀಹರಿಬಾಬು, ಕಾರ್ಣಿಕೋತ್ಸವದಲ್ಲಿ ಭಾಗವಹಿಸಿದ್ದರು.



# ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

**ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿಕೆ | ಕಾಮಗಾರಿಗೆ ಚಾಲನೆ**



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಕ್ಷೇತ್ರದ ವಿವಿಧೆಡೆ 10 ಕೋಟಿಗೂ ಹೆಚ್ಚು ಅನುದಾನದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಶುಕ್ರವಾರ ಚಾಲನೆ ನೀಡಿದರು.

ತಾಲ್ಲೂಕಿನ ಲೋಕಿಕೆರೆ ಗ್ರಾಮದಲ್ಲಿನ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ 35 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ಮತ್ತು 18 ಲಕ್ಷ ವೆಚ್ಚದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ, 8.7 ಕೋಟಿ ವೆಚ್ಚದಲ್ಲಿ ತಾಲ್ಲೂಕಿನ ತಾಯಕನಹಳ್ಳಿಯಿಂದ ಹೂಡೇಂ ಗ್ರಾಮದವರಗೆ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ, 1.50 ಕೋಟಿ ವೆಚ್ಚದಲ್ಲಿ ರಾಮಸಾಗರಹಟ್ಟಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮೂಲ ಸೌಕರ್ಯಗಳು ಹಾಗೂ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿ, ಕಂಪ್ಯೂಟರ್ ಲ್ಯಾಬ್ ಉದ್ಘಾಟಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚಿನ ಅದ್ಯತೆ ನೀಡಲಾಗುತ್ತಿದ್ದು, ಅನೇಕ ಕಡೆ ಹದಗೆಟ್ಟಿರುವ ರಸ್ತೆಗಳನ್ನು ದುರಸ್ತಿ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಕಾರ್ಯವನ್ನು ಮಾಡಲಾಗುತ್ತಿದೆ. ಗ್ಯಾರಂಟಿಗಳಿಂದ ಅನುದಾನ ಸಿಗುತ್ತಿಲ್ಲ ಎನ್ನುವ ವಿರೊಧ ಪಕ್ಷಗಳ ಆರೋಪಕ್ಕೆ ನಮ್ಮ ಅಭಿವೃದ್ಧಿ ಕಾರ್ಯಗಳು ಉತ್ತರವಾಗಿವೆ ಎಂದರು. ಜಿ ಓಬಣ್ಣ, ಎಇಇ ನಾಗನಗೌಡ, ಜುಮ್ಮುಬನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೇ ಸಾಕಮ್ಮ.ಕೆ ಓಬಣ್ಣ. ಉಪಾಧ್ಯಕ್ಷೆ ಗಂಗಮ್ಮ, ಆರ್,ರುದ್ರೇಶ್, ಸದಸ್ಯರು ಮುಖಂಡರಿದ್ದರು

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರಾರಂಭ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

# ಫೆ.17 ರಿಂದ ಫೆ.24 ರವರೆಗೆ ರಸ್ತೆ ಸಂಚಾರ ಗಣತಿ ಸಪ್ತಾಹ ಆರಂಭ

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಗಣತಿ ಕೇಂದ್ರಗಳನ್ನು ಆರಂಭಿಸಿ ರಸ್ತೆ ಸಂಚಾರ ಗಣತಿ ಸಪ್ತಾಹವನ್ನು ಫೆ.17 ರಿಂದ ಫೆ.24 ರವರೆಗೆ ಹಮ್ಮಿಕೊಳ್ಳಲಾಗಿರುತ್ತದೆ ಎಂದು ವಿಜಯನಗರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಪ್ರತಿ ವರ್ಷಕ್ಕೊಮ್ಮೆ ಎರಡು ದಿನ ಮತ್ತು ಐದು ವರ್ಷಗಳಿಗೊಮ್ಮೆ ಏಳು ದಿನಗಳ ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ವಾಹನ ಸಂಚಾರ ಗಣತಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಈ ಗಣತಿಯಿಂದ ಸಂಗ್ರಹಿಸಿದ ಮಾಹಿತಿಯಿಂದ ಸರ್ಕಾರಕ್ಕೆ ರಸ್ತೆಗಳ ಸಂಚಾರ ಸಾಂದ್ರತೆ, ರಸ್ತೆಗಳ ವಿಸ್ತರಣೆ ನಿರ್ಧರಿಸಲು, ರಸ್ತೆಗಳನ್ನು ಮೇಲ್ದರ್ಜೆಗೇರಿಸಲು, ರಸ್ತೆಗಳ ಸ್ಥಿತಿಗತಿ ಸುಧಾರಿಸಲು ಅನುಕೂಲವಾಗುತ್ತದೆ ಎಂಬ ನಿಟ್ಟಿನಲ್ಲಿ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತದೆ. ಫೆ.17 ರ ಬೆ.6 ಗಂಟೆಯಿಂದ ಫೆ.24 ರ ಬೆ.6 ಗಂಟೆಯವರೆಗೆ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಸಂಚರಿಸುವ ಎಲ್ಲಾ ವಾಹನಗಳ ಚಾಲಕರು ಗಣತಿ ಕೇಂದ್ರಗಳಿದ್ದಲ್ಲಿ ತಮ್ಮ ವಾಹನಗಳನ್ನು ನಿಧಾನವಾಗಿ ಚಲಾಯಿಸಲು ತಿಳಿಸಲಾಗಿದೆ.

# ನಕಲಿ ಪತ್ರಕರ್ತರ ಹಾವಳಿ ನಿಯಂತ್ರಿಸಿ ಕಾ.ನಿ.ಪ. ತಾಲೂಕ ಸಂಘ ಮನವಿ

**ಕಾನಿಪ ಸಂಘದ ತಾಲೂಕಧ್ಯಕ್ಷ ಮಂಜು ಮಯೂರ ಒತ್ತಾಯ**



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮೀಡಿಯಾ ಸಂಸ್ಥೆ ಅಥವಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾನ್ಯತೆ ಪಡೆಯದ ಮತ್ತು ಈ ಭಾಗದಲ್ಲಿ ಪ್ರಸಾರ ಇಲ್ಲದ ಪತ್ರಿಕೆಗಳ ಹೆಸರೇಳಿಕೊಂಡು ಅಧಿಕಾರಿಗಳಿಗೆ ಬೆದರಿಕೆಯೊಡ್ಡುವ ನಕಲಿ ಪತ್ರಕರ್ತರ ಹಾವಳಿಗೆ ಕಡಿವಾಣ ಹಾಕುವಂತೆ ಕಾರ್ಯನಿರತ ಪತ್ರಕರ್ತರ ಸಂಘ ತಾಲೂಕು ಘಟಕದವತಿಯಿಂದ ಶುಕ್ರವಾರ ಗ್ರೇಡ್ 2 ತಹಸೀಲ್ದಾರ್ ವಿ.ಕೆ.ನೇತ್ರಾವತಿ ಮುಖಾಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಂಜು ಮಯೂರ ಮಾತನಾಡಿ, ತಾಲೂಕಿನಲ್ಲಿ ನಕಲಿ ಪತ್ರಕರ್ತರ ಹಾವಳಿ ದಿನೇ ದಿನೇ ಹೆಚ್ಚಾಗುತ್ತಿದೆ. ಈ ನಕಲಿ ಪತ್ರಕರ್ತರು ಯಾವುದೇ ಪತ್ರಿಕೆಯಲ್ಲಿ ವರದಿ ಮಾಡದೇ, ವರದಿಗಾರರೆಂದು ಹೇಳಿಕೊಂಡು ಪ್ರಸಾರ ಇಲ್ಲದ ಪತ್ರಿಕೆಯ ಹೆಸರಿನಲ್ಲಿ ಗುರುತಿನ ಪತ್ರ (ಐಡಿ ಕಾರ್ಡ್) ತೋರಿಸಿ ಸರ್ಕಾರಿ ಕಚೇರಿಗಳಿಗೆ ತೆರಳಿ ಇಲ್ಲಸಲ್ಲದ ಪ್ರಶ್ನೆ ಕೇಳಿ, ಮಾಹಿತಿ ಹಕ್ಕಿನ ಹೆಸರಿನಡಿ ಬೆದರಿಸಿ, ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ ಎನ್ನುವ ದೂರುಗಳು ದಟ್ಟವಾಗಿ ಕೇಳಿಬಂದಿವೆ.

ಬೇರೆ ಜಿಲ್ಲೆಗಳಿಂದಲೂ ಈ ತಾಲೂಕಿಗೆ ಬಂದು ಅಧಿಕಾರಿಗಳಿಗೆ ಹಣಕ್ಕೆ ಬೇಡಿಕೆ ಇಡುತ್ತಿರುವುದಕ್ಕೆ ಅಧಿಕಾರಿಗಳು ರೋಸಿಹೋಗಿದ್ದು, ಅಧಿಕಾರಿಗಳಿಗೆ ಮಾಹಿತಿ ನೀಡುವುದೇ ದೊಡ್ಡ ಸವಾಲಾಗಿದೆ. ಸರ್ಕಾರಿ ಕೆಲಸಕ್ಕೆ ತೊಂದರೆ ಮಾಡುವ ನಕಲಿ ಪತ್ರಕರ್ತರಿಂದ, ಅಧಿಕೃತ ಹಾಗೂ ನಿರಂತರವಾಗಿ ಕಾರ್ಯೋನ್ಮುಖವಾಗಿ ವರದಿ ಮಾಡುವ ಪತ್ರಕರ್ತರಿಗೆ ಮುಜುಗರ ಉಂಟಾಗುತ್ತಿದ್ದು, ಸಮಾಜದಲ್ಲಿ ಅರ್ಹ ಪತ್ರಕರ್ತರಿಗೆ ವಿಶ್ವಾಸ ಕುಂದುವಂತಾಗುತ್ತಿದೆ. ನಕಲಿ ಪತ್ರಕರ್ತರನ್ನು ಗುರುತಿಸಿ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಗ್ರೇಡ್ 2 ತಹಸೀಲ್ದಾರ್ ವಿ.ಕೆ.ನೇತ್ರಾವತಿ ಮನವಿ ಪತ್ರ ಸ್ವೀಕರಿಸಿದರು. ಇದೇ ಸಂಧರ್ಭದಲ್ಲಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಮೂಲಕ ಎಸ್ಪಿ ಬಿ.ಎಲ್. ಶ್ರೀ ಹರಿಬಾಬು ಗೆ ಮನವಿ ಸಲ್ಲಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಉಪಾಧ್ಯಕ್ಷ ಸುನೀಲ್ ಗೌಡ, ಕಾರ್ಯದರ್ಶಿ ಎ.ಎಂ.ಸೋಮಶೇಖರಯ್ಯ, ಖಜಾಂಚಿ ಎಚ್.ವೀರಣ್ಣ, ಸದಸ್ಯರಾದ ವೀರೇಶ್ ಅಂಗಡಿ, ಕೆ.ಎಂ.ವೀರೇಶ್, ಮಾರೇಶ್ ತಿಪ್ಪೇಹಳ್ಳಿ, ಹೂಡೇಂ ಮಂಜುನಾಥ, ಬಿ.ನಾಗರಾಜ, ಎಲೆ ನಾಗರಾಜ, ಇಬ್ರಾಹಿಂ ಖಲೀಲ್, ಬುಗುಡಿ ಬಾಲಪ್ಪ ಇದ್ದರು.

# ಸರ್ಕಾರಿ ಆದರ್ಶ ವಿದ್ಯಾಲಯ 6ನೇ ತರಗತಿ ದಾಖಲಾತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಹಿರಿಯಾಳಕುಡಂನ ಈದ್ಗಾ ರಸ್ತೆಯ ಸರ್ಕಾರಿ ಆದರ್ಶ ವಿದ್ಯಾಲಯ ಶಾಲೆಗೆ 2025–26ನೇ ಸಾಲಿನ 6ನೇ ತರಗತಿ ದಾಖಲಾತಿಗೆ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಾಲೆಯ ಮುಖ್ಯ ಗುರುಗಳು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಈಗ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಪ್ರವೇಶ ಪರೀಕ್ಷೆಗೆ ಅರ್ಜಿಯನ್ನು ಅಂತರ್ ಜಾಲದಲ್ಲಿ (ಆನ್‌ಲೈನ್) www. vidyavahini.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಫೆಬ್ರವರಿ 28 ಕೊನೆಯ ದಿನ ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕುರುಗೋಡು ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕ್ಷೇತ್ರ ಸಮಾನ್ವಯಾಧಿಕಾರಿಗಳ ಕಚೇರಿ ಮತ್ತು ಕುರುಗೋಡು ಆದರ್ಶ ವಿದ್ಯಾಲಯ ಶಾಲೆಯ ಮುಖ್ಯಗುರುಗಳ ಕಚೇರಿ ಅಥವಾ ಮೊ.9740738762 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

**ಕೆರೆ ಸಂರಕ್ಷಣಾ ಪ್ರಾಧಿಕಾರದ ಜಿಲ್ಲಾ ಮಟ್ಟದ ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚನೆ**

# ಕೆರೆಗಳ ನೀರಿನ ಗುಣಮಟ್ಟ ಪರೀಕ್ಷಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಕಳೆದ ಬಾರಿ ಉತ್ತಮ ಮಳೆಯಾಗಿದೆ. ಜಿಲ್ಲೆಯ ಎಲ್ಲ ಕೆರೆಗಳು ಭರ್ತಿಯಾಗಿದ್ದು, ಕೆರೆಗಳ ನೀರಿನ ಗುಣಮಟ್ಟ ಪರೀಕ್ಷಿಸಿ ವರದಿಯನ್ನು ಸಿದ್ದವಿಟ್ಟುಕೊಳ್ಳುವಂತೆ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬೃಹತ್ ನೀರಾವರಿ, ಸಣ್ಣ ನೀರಾವರಿ, ಪಂಚಾಯತ್ ಇಂಜಿನಿಯರಿಂಗ್ ಗ್ರಾಮ ಪಂಚಾಯಿತಿ ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ವೈಜ್ಞಾನಿಕವಾಗಿ ಗುರುತಿಸಬೇಕು. ಹೀಗೆ ಗುರುತಿಸಿದ ಜಲಮೂಲಗಳ ಸರ್ವೇ ಕಾರ್ಯವನ್ನು ಕೈಗೊಳ್ಳಬೇಕು. ಸುಪ್ರಿಂ ಕೋರ್ಟ್ ಹಾಗೂ ಹಸಿರು ನ್ಯಾಯಾಧೀಕರಣ ನೀಡಿರುವ ತೀರ್ಪಿನ ಅನುಸಾರ ಬಫರ್ ಜೋನ್ ಗುರುತಿಸುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ನಿರ್ದೇಶನ ನೀಡಿದರು.

ಕೆರೆಗಳಿಗೆ ತ್ಯಾಜ್ಯ ನೀರು ಸೇರಿದಂತೆ ನೋಡಿಕೊಳ್ಳಬೇಕು. ಕೆರೆ ನೀರು ಸೇರುವ ಹಳ್ಳದ ಮಾರ್ಗಗಳನ್ನು ಸ್ವಚ್ಛಗೊಳಿಸಬೇಕು. ಕೆರೆ ತುಂಬಿ ಕೋಡಿ ನೀರು ಹರಿದು ಹೋಗುಲು ವ್ಯವಸ್ಥೆ ಮಾಡಬೇಕು. ಕೆರೆ ನೀರಿನಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗದಂತೆ, ಮೀನುಗಳು ಹಾಗೂ ಜಲಚರಗಳ ಆವಾಸ ಸ್ಥಾನಕ್ಕೆ ಧಕ್ಕೆಯಾಗದಂತೆ ಕಾಪಾಡಿಕೊಳ್ಳಬೇಕು. ಕೆರೆಗಳ ಅಭಿವೃದ್ಧಿ ಕುರಿತಾದ ಕ್ರಿಯಾ ಯೋಜನೆಗಳನ್ನು ರೂಪಿಸಿ, ಕಾಮಗಾರಿ ಆರಂಭಕ್ಕೆ ಅನುಮತಿ ಪಡೆಯುವಂತೆ ಜಿಲ್ಲಾಧಿಕಾರಿ ತಿಳಿಸಿದರು.


ಜಿಲ್ಲೆಯಲ್ಲಿ 189 ಕೆರೆ ಹಾಗೂ ಜಲಮೂಲಗಳನ್ನು ಗುರುತಿಸಲಾಗಿದೆ. ಇದರಲ್ಲಿ ಸಣ್ಣ ನೀರಾವರಿ ಇಲಾಖೆಯಡಿ 84, ಪಂಚಾಯತ್ ಇಂಜಿನಿಯರಿಂಗ್ ಹಾಗೂ ಗ್ರಾಮ ಪಂಚಾಯಿತಿಗಳ ಅಡಿ 93, ಜಲ ಸಂಪನ್ಮೂಲ (ಬೃಹತ್ ನೀರಾವರಿ) 2, ಕಂದಾಯ ಇಲಾಖೆಯಡಿ 9 ಹಾಗೂ ಅರಣ್ಯ ಇಲಾಖೆಯಡಿ 1 ಕೆರೆಗಳಿವೆ. ಈ ಎಲ್ಲ ಕೆರೆಗಳ ಸರ್ವೇ ಕಾರ್ಯ ಪೂರ್ಣಗೊಳಿಸಿ ಕೆರೆಗಳನ್ನು ಅಳೆತೆ ಮಾಡಲಾಗಿದೆ. 5 ಕೆರಹೋಗುವಂತೆ ಒತ್ತುವರಿ ಗುರುತಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿಕಾರಿಗಳು, ಭೂ ದಾಖಲೆಗಳ ಉಪನಿರ್ದೇಶಕರು, ಸಣ್ಣ ನೀರಾವರಿ ಇಲಾಖೆ ಕಾರ್ಯಪಾಲಕ ಅಭಿಯಂತರು, ಅಧಿಕಾರಿಗಳು ಉಪಸ್ಥಿತರಿದ್ದರು.

# ಫೆ.15 ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**

ವೆಂಕಟಾಪುರದ 66/11 ಕೆವಿ ವಿದ್ಯುತ್ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಯುತ್ತಿರುವುದರಿಂದ ಫೆ.15ರಂದು ಮರಿಯಮ್ಮನಹಳ್ಳಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಫೆ.15 ಗುರುವಾರ ಬೆ.9 ಗಂಟೆಯಿಂದ ಸಂಜೆ 3 ಗಂಟೆಯವರೆಗೆ ಮರಿಯಮ್ಮನಹಳ್ಳಿ ಶಾಖಾ ವ್ಯಾಪ್ತಿಗೆ ಒಳಪಡುವ ಮರಿಯುಮ್ಮನಹಳ್ಳಿ ಪಟ್ಟಣ, ಡಣಾನಾಯಕನಕೆರೆ, ನಾಗಲಾಪುರ ವ್ಯಾಪ್ತಿಗೆ ಬರುವ ಗ್ರಾಮಗಳು ಹಾಗೂ ನೀರಾವರಿ ಪಂಪ್ ಸೆಟ್ ರೈತರಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸ ಬೇಕೆಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ತಿಳಿಸಿದ್ದಾರೆ.

# ಸೇವೆಗಳಲ್ಲಿ ವ್ಯತ್ಯಯವಾದ್ರೆ ಸಂಪರ್ಕಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಕಂದಾಯ ಘಟಕದ ವಿವಿಧ ಕಂದಾಯ ಸೇವೆಗಳಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾದಲ್ಲಿ ಸಾರ್ವಜನಿಕರು ಜಿಲ್ಲಾಧಿಕಾರಿಗಳ ಕಚೇರಿಯ ಕಂಟ್ರೋಲ್ ರೂಂ ಸಂಖ್ಯೆ 08392–277100, ಮೊ.8277888866 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ. ಜಿಲ್ಲೆಯ ಕಂದಾಯ ಘಟಕದ ಗ್ರಾಮ ಆಡಳಿತ ಅಧಿಕಾರಿಗಳು 3, 4 ದಿನಗಳಿಂದ ವಿವಿಧ ಬೇಡಿಕೆಗಳಿಗಾಗಿ ಮುಷ್ಕರ ಕೈಗೊಂಡಿದ್ದು, ಗ್ರಾಮ ಆಡಳಿತ ಅಧಿಕಾರಿಗಳು ಒದಗಿಸುವ ಕಂದಾಯ ಸೇವೆಗಳಲ್ಲಿ ಏನಾದರೂ ಮಾಹಿತಿಗಾಗಿ ಕೂಡಲೇ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.